ಸಂಪುಟ : 8 ಸಂಚಿಕೆ : 233 ಪುಟ : 4 ಬೆಲೆ : 3.00 ಶನಿವಾರ ಅಕ್ಟೋಬರ್ 21, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 233 Pages : 4 Price : 3.00 Saturday October 21, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ: ಗದಗ ಜಿಲ್ಲೆ ಅಗ್ರಸ್ಥಾನ

■ವಿಜಯಸಾಕ್ಷಿ ಸುದ್ದಿ, ಗದಗ

ಬೆಳೆ ಸಮೀಕ್ಷೆ ಯೋಜನೆ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಬೆಳೆ ಸಮೀಕ್ಷೆ ದತ್ತಾಂಶ ಕ್ರೋಢೀಕರಣದಲ್ಲಿ ಕರ್ನಾಟಕ ರಾಜ್ಯ ದೇಶಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ರೈತರ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆ ನಿಗದಿ ಯೋಜನೆ, ಬೆಳೆ ವಿಮೆ, ಬರಗಾಲ ಹಾಗೂ ಪ್ರವಾಹ ಸಂದರ್ಭದಲ್ಲಿ ಉಂಟಾದ ನಷ್ಟ ಪರಿಹಾರ ಪಡೆಯಲು, ಭೂಮಿಯ ಪಹಣಿಪತ್ರದಲ್ಲಿ ಬೆಳೆ ವಿವರ ದಾಖಲಿಸಲು ಮತ್ತು ಬೆಳೆಸಾಲ ಪಡೆಯುವಲ್ಲಿ ಸಮೀಕ್ಷೆ ವಿವರಗಳನ್ನು ಬಳಸಿಕೊಳ್ಳಲಾಗುತ್ತದೆ. ಈ ರೀತಿಯ ತಂತ್ರಾಂಶ ಬಳಕೆಯಲ್ಲಿ ರಾಜ್ಯ ದೇಶಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ಅತೀ ಹೆಚ್ಚು ರೈತರು ಖುದ್ದಾಗಿ ಬೆಳೆ ಸಮೀಕ್ಷೆಯನ್ನು ಮೊಬೈಲ್ ತಂತ್ರಾಂಶ ಬಳಸಿಕೊಂಡು, 39036 ರೈತರು ಬೆಳೆ ಸಮೀಕ್ಷೆ ದಾಖಲಿಸಿದ್ದಾರೆ.

ಈ ಸಮೀಕ್ಷೆಯ ಆಂದೋಲನದಲ್ಲಿ ಕೃಷಿ, ಕಂದಾಯ, ತೋಟಗಾರಿಕೆ, ರೇಷ್ಮೆ ಹಾಗೂ ಸ್ಥಳೀಯ ಖಾಸಗಿ ನಿವಾಸಿಗಳಿಂದ ರೈತರಿಗೆ ಮೊಬೈಲ್ ತಂತ್ರಾಂಶದ ಬಳಕೆ ಕುರಿತು ಜಾಗೃತಿ ಮೂಡಿಸಿದ ಫಲಶೃತಿಯಿಂದ ಬೆಳೆ ಸಮೀಕ್ಷೆಯಲ್ಲಿ ಜಿಲ್ಲೆ ಪ್ರಥಮ ಶ್ರೇಣಿಯಲ್ಲಿ ಮುಂಚೂಣಿ ಪಡೆದುಕೊಂಡು ರಾಜ್ಯಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ ರೈತರು ಸಕಾಲದಲ್ಲೆ ಬೆಳೆ ಸಮೀಕ್ಷೆ ವಿವರಗಳನ್ನು ದಾಖಲಿಸಲು ಶ್ರಮವಹಿಸಿದ ಪರಿಣಾಮವಾಗಿ ಕಳೆದ ಮೂರು ವರ್ಷದ ಹಂಗಾಮುಗಳಲ್ಲಿಯೂ ಬೆಳೆ ಸಮೀಕ್ಷೆ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಜಿಲ್ಲೆ ಎಂಬ ಹೆಗ್ಗಳಿಕೆ ಗದಗ ಪಾತ್ರವಾಗಿದೆ. ಈ ಸಮೀಕ್ಷೆಯಲ್ಲಿ ಭಾಗಿಯಾದ ರೈತ ಬಾಂಧವರಿಗೆ ಹಾಗೂ ಆಯಾ ಇಲಾಖೆಗಳ ಅಧಿಕಾರಿಗಳಿಗೆ ಹಾಗೂ ಸ್ಥಳೀಯ ನಿವಾಸಿಗಳಿಗೆ ಜಿಲ್ಲಾಧಿಕಾರಿ ಅವರು ಅಭಿನಂದನೆ ಸಲ್ಲಿಸಿ, ಇನ್ನೂ ಹೆಚ್ಚಿನ ರೀತಿಯಲ್ಲಿ ದಾಖಲಿಸುವಂತೆಯೂ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಜಿಲ್ಲಾ ಪ್ರವಾಸ



■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ಅಕ್ಟೋಬರ್ 21 ರ ಗದಗ ಜಿಲ್ಲಾ ಪ್ರವಾಸದ ವಿವರ ಇಂತಿದೆ.

ಅಕ್ಟೋಬರ್ 21 ರಂದು ಬೆಳಿಗ್ಗೆ 7.30 ಗಂಟೆಗೆ ಗದಗನಲ್ಲಿ ಅಂಬಾಭವಾನಿ ದೇವಸ್ಥಾನದಲ್ಲಿ ದಸರಾ ಉತ್ಸವದಲ್ಲಿ ಪಾಲ್ಗೊಳ್ಳುವರು. ಬೆಳಿಗ್ಗೆ 10 ಗಂಟೆಗೆ ನಗರದ ಭೀಷ್ಮ ಕೆರೆಯಲ್ಲಿ ಹಾಯಿ ದೋಣಿ ತರಬೇತಿ ಶಿಬಿರ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಬೆಳಿಗ್ಗೆ 10.30 ಗಂಟೆಗೆ ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಥರ್ಡ್-ಐ ಹಾಗೂ ಮಾದಕ ದ್ರವ್ಯ ಮುಕ್ತ ಗದಗ ಜಿಲ್ಲೆ ಜಾಗೃತಿ ಅಭಿಯಾನ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 12 ಗಂಟೆಗೆ ಹುಬ್ಬಳ್ಳಿ ರಸ್ತೆಯಲ್ಲಿನ ಪಂಡಿತ ಭೀಮಸೇನ್ ಜೋಶಿ ರಂಗಮಂದಿರದಲ್ಲಿ ಥರ್ಡ್-ಐ ಹಾಗೂ ಮಾದಕ ದ್ರವ್ಯ ಮುಕ್ತ ಗದಗ ಜಿಲ್ಲೆ ಜಾಗೃತಿ ಅಭಿಯಾನ ಜಾಗೃತಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

ಮಧ್ಯಾಹ್ನ 2 ಗಂಟೆಗೆ ಗದಗಿನಿಂದ ಹಾವೇರಿಗೆ ಪ್ರಯಾಣ ಮಾಡುವರು.

ಅದೇ ದಿನ ಸಂಜೆ 6 ಗಂಟೆಗೆ ಹಾವೇರಿಯಿಂದ ಗದಗಿಗೆ ಆಗಮಿಸಿ ನಗರದ ಮುಳಗುಂದ ರಸ್ತೆಯಲ್ಲಿನ ದಿ ಮಸಲ್ ಫ್ಯಾಕ್ಟರಿ ಜಿಮ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಸಚಿವರ ಕಾರ್ಯಾಲಯದ ಮೂಲಗಳು ತಿಳಿಸಿವೆ.

## ಥರ್ಡ್-ಐ, ಮಾದಕ ವ್ಯಸನ ಮುಕ್ತ ಗದಗ ಜಿಲ್ಲೆ ಜಾಗೃತಿ ಅಭಿಯಾನ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಪೊಲೀಸ್ ಇಲಾಖೆಯಿಂದ ದಕ್ಷ ಪೊಲೀಸ್ ಸುರಕ್ಷಿತ ಗದಗ-ಬೆಟಗೇರಿ ಥರ್ಡ್- ಐ ಹಾಗೂ ಮಾದಕ ವ್ಯಸನ ಮುಕ್ತ ಗದಗ ಜಿಲ್ಲೆ ಜಾಗೃತಿ ಅಭಿಯಾನದ ಉದ್ಘಾಟನಾ ಸಮಾರಂಭವನ್ನು ನಗರದ ಹುಬ್ಬಳ್ಳಿ ರಸ್ತೆಯಲ್ಲಿನ ಪಂ. ಭೀಮಸೇನ ಜೋಶಿ ರಂಗಮಂದಿರದಲ್ಲಿ ಅಕ್ಟೋಬರ್ 21 ರಂದು ಮಧ್ಯಾಹ್ನ 12 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಗೃಹ ಸಚಿವರಾದ ಜಿ. ಪರಮೇಶ್ವರ ಹಾಗೂ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಸಮಾರಂಭದಲ್ಲಿ ಪಾಲ್ಗೊಳ್ಳುವರು.

**ಜಾಗೃತಿ ಜಾಥಾ :** ಥರ್ಡ್-ಐ ಮತ್ತು ಮಾದಕ ವ್ಯಸನ ಮುಕ್ತ ಗದಗ ಜಿಲ್ಲೆ ಜಾಗೃತಿ ಜಾಥಾವು ಅಕ್ಟೋಬರ್ 21 ರಂದು ಬೆಳಿಗ್ಗೆ 10.30 ಗಂಟೆಗೆ ಮಹಾತ್ಮ ಗಾಂಧಿ ವೃತ್ತದಿಂದ ಪ್ರಾರಂಭವಾಗಿ ಮಹೇಂದ್ರಕರ್ ವೃತ್ತ , ಹುಯಿಲಗೋಳ ನಾರಾಯಣರಾವ್ ವೃತ್ತ , ಬಸವೇಶ್ವರ ವೃತ್ತ , ಜೋಡು ಮಾರುತಿ ದೇವಸ್ಥಾನದ ವೃತ್ತ , ಮುಳಗುಂದ ನಾಕಾ ಮಾರ್ಗವಾಗಿ ಪಂ. ಭೀಮಸೇನ ಜೋಶಿ ರಂಗಮಂದಿರ ತಲುಪುವುದು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಸರ್ವರಿಗೂ ಸ್ವಾಗತ ಕೋರಿದ್ದಾರೆ.

### ಪಾರಂಪರಿಕ ಟಾಂಗಾ ಸವಾರಿಯ ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಎಚ್.ಕೆ ಪಾಟೀಲ

# ಮೈಸೂರು ದಸರಾ ವಿಶ್ವದಲ್ಲಿಯೇ ಶ್ರೇಷ್ಠ

■ವಿಜಯಸಾಕ್ಷಿ ಸುದ್ದಿ, ಮೈಸೂರು

ವಿಜಯನಗರ ಸಾಮ್ರಾಜ್ಯ ಆಚರಿಸಿಕೊಂಡು ಬಂದಿದ್ದ ದಸರಾ ಉತ್ಸವ ಪದ್ಧತಿಯನ್ನು ಮೈಸೂರಿನ ಮಹಾರಾಜರು ಮುಂದುವರೆಸಿಕೊಂಡು ಬರುವ ಮೂಲಕ ಈಡೀ ಜಗತ್ತು ಮೈಸೂರಿನತ್ತ ನೋಡುವಂತೆ ಮಾಡಿದ್ದಾರೆ. ಇದಕ್ಕೆ ಮೈಸೂರು ಮಹಾರಾಜರಿಗೆ ನಾಡಿನ ಬಗ್ಗೆ ಇದ್ದ ಅಭಿಮಾನವೇ ಕಾರಣ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರಾದ ಡಾ. ಎಚ್.ಕೆ ಪಾಟೀಲ ಅಭಿಪ್ರಾಯಪಟ್ಟರು.



ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಪಾರಂಪರಿಕ ಉಡುಗೆಯಲ್ಲಿ ನೂತನ ದಂಪತಿಗಳಿಗಾಗಿ ಆಯೋಜಿಸಿದ್ದ ಪಾರಂಪರಿಕ ಟಾಂಗಾ ಸವಾರಿಯ ಕಾರ್ಯಕ್ರಮವನ್ನು ಪುರಾತತ್ವ ಇಲಾಖೆಯ ಆಯುಕ್ತರಾದ ದೇವರಾಜು, ಮಹಾಪೌರರಾದ ಶಿವಕುಮಾರ್, ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರಾದ ಸವಿತಾ ಸುನೀಲ್ ಬೋಸ್ ದಂಪತಿಗಳಿಗೆ ಬಾಗಿನ ನೀಡುವ ಮೂಲಕ ಉದ್ಘಾಟಿಸಿದ ನಂತರ ಮಾತನಾಡಿದರು.

> ರಾಜ್ಯದಲ್ಲಿ ಒಟ್ಟು 25 ಸಾವಿರ ಪಾರಂಪರಿಕ ಕಟ್ಟಡಗಳು, ಸ್ಮಾರಕಗಳಿವೆ. ಇವುಗಳಲ್ಲಿ 500ರಿಂದ 600 ಪಾರಂಪರಿಕ ಕಟ್ಟಡಗಳನ್ನು ಸರ್ಕಾರ ಗುರುತಿಸಿದೆ. ಇನ್ನೂ 500 ಪಾರಂಪರಿಕ ಕಟ್ಟಡಗಳನ್ನು ಗುರುತಿಸಿ ಉಳಿಸಿ ಸಂರಕ್ಷಿಸಲು ಯೋಜನೆಯನ್ನು ರೂಪಿಸಲಾಗುತ್ತಿದೆ. ಎಲ್ಲಾ ಪಾರಂಪರಿಕ ಕಟ್ಟಡಗಳಾಗಲಿ, ಸ್ಮಾರಕಗಳನ್ನಾಗಲಿ ಸರ್ಕಾರ ಒಂದೇ ಕೆಲಸ ಮಾಡಲು ಸಾಧ್ಯವಿಲ್ಲ. ಬದಲಾಗಿ, ಅದಕ್ಕೆ ಜನಸಾಮಾನ್ಯರ ಅಭಿಮಾನ ಹಾಗೂ ಸಹಕಾರ ಬೇಕಾಗುತ್ತೆ.
>
> **– ಸಚಿವ ಡಾ. ಎಚ್.ಕೆ ಪಾಟೀಲ**

ಕನ್ನಡ ನಾಡಿಗೇ ಹಬ್ಬವಾಗಿರುವ ದಸರಾ ಮೈಸೂರಿಗಾಗಲಿ, ನಾಡಿಗಾಗಲಿ ಸೀಮಿತವಾಗಿಲ್ಲ. ವಿಶ್ವವಿಖ್ಯಾತವಾಗಿರುವ ದಸರಾ ಇಡೀ ವಿಶ್ವದಲ್ಲಿಯೇ ಶ್ರೇಷ್ಠವಾಗಿದೆ. ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ ಮಹದೇವಪ್ಪ ಅವರು ದಸರಾ ಮಹೋತ್ಸವದ ಬಗ್ಗೆ ಅಪಾರ ಕಾಳಜಿ ವಹಿಸಿದ್ದು, ದಸರಾ ಯಶಸ್ವಿಯಾಗಲು ಶ್ರಮಿಸುತ್ತಿದ್ದಾರೆ ಎಂದರು.

▶▶3ನೇ ಪುಟಕ್ಕೆ

### ಇಂದಿನಿಂದ ನ.5 ರವರೆಗೆ ಭೀಷ್ಮ ಕೆರೆಯಲ್ಲಿ ಹಾಯಿದೋಣಿ ಜಲಕ್ರೀಡಾ ಶಿಬಿರ

# ಬಹುನಿರೀಕ್ಷಿತ ಶಿಬಿರಕ್ಕೆ ಸಚಿವ ಡಾ.ಎಚ್.ಕೆ.ಪಾಟೀಲ ಚಾಲನೆ

■ವಿಜಯಸಾಕ್ಷಿ ಸುದ್ದಿ, ಗದಗ

ಯುವಕ-ಯುವತಿಯರಲ್ಲಿ ಕ್ರೀಡಾ ಅಭಿರುಚಿಯನ್ನು ಅಭಿವ್ಯಕ್ತಿ ಪಡಿಸಲು ಅ.21ರಿಂದ ನವೆಂಬರ್ 5ರವರೆಗೆ ಭೀಷ್ಮ ಕೆರೆಯಲ್ಲಿ 'ಹಾಯಿ ದೋಣಿ ಜಲ ಕ್ರೀಡಾ ತರಬೇತಿ ಶಿಬಿರ'ವನ್ನು ಆಯೋಜಿಸಲಾಗಿದೆ.

> **ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ವಿಶೇಷ ಆಹ್ವಾನಿತರಾಗಿ ಆಗಮಿಸುವರು. ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ವರ ವಿಭೂತಿ ಹಾಗೂ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಶರಣು ಗೋಗೇರಿ ಸರ್ವರಿಗೂ ಸ್ವಾಗತ ಕೋರಿದ್ದಾರೆ.**



ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಸ್ಪೋರ್ಟ್ಸ್ ಅಸೋಸಿಯೇಶನ್ ಸೇರಿದಂತೆ ಇತರ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಹಾಯಿ ದೋಣಿ ಜಲಕ್ರೀಡಾ ತರಬೇತಿ ಶಿಬಿರವನ್ನು ಜಿಲ್ಲೆಯ ಉತ್ಸಾಹಿ ಯುವ ಜನತೆಗೆ ಏರ್ಪಡಿಸಲಾಗಿದೆ.

ತರಬೇತಿಯು ಐದು ದಿನಗಳ ಅವಧಿಯದ್ದಾಗಿದ್ದು, ಮೊದಲನೇ ಬ್ಯಾಚ್ ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1.30ರ ವರೆಗೆ, ಎರಡನೇ ಬ್ಯಾಚ್ ಮಧ್ಯಾಹ್ನ 2.30ರಿಂದ ಸಂಜೆ 6.30ರ ವರೆಗೆ ಏರ್ಪಡಿಸಲಾಗುವದು. 7 ವರ್ಷ ಮೇಲ್ಪಟ್ಟ ಮಕ್ಕಳು, ವಯಸ್ಕರ ತರಬೇತಿಯನ್ನು ನುರಿತ ತರಬೇತುದಾರರಿಂದ 5 ದಿನಗಳ ಕಾಲ ನೀಡಲಾಗುವದು.

ನೋಂದಣಿ ಶುಲ್ಕವಾಗಿ 5 ಸಾವಿರ ರೂ.ಗಳನ್ನು ನಿಗದಿಪಡಿಸಲಾಗಿದೆ.

▶▶3ನೇ ಪುಟಕ್ಕೆ

## ಉಚಿತ ಆಯುರ್ವೇದ ಚಿಕಿತ್ಸೆ, ಆದರ್ಶ ದಂಪತಿ ಕಾರ್ಯಕ್ರಮ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಎಸ್‌ಎಸ್‌ಕೆ ದಸರಾ ಉತ್ಸವ ಸಮಿತಿ ವತಿಯಿಂದ ಶನಿವಾರ ಬೆಳಿಗ್ಗೆ 8 ಗಂಟೆಯಿಂದ ಮದ್ಯಾಹ್ನ 1 ಗಂಟೆಯವರೆಗೆ ಧನ್ವಂತರಿ ಆಯುರ್ವೆದಿಕ್ ಸೆಂಟರ್ ಇವರಿಂದ ಉಚಿತ ಆಯುರ್ವೇದ ಚಿಕಿತ್ಸೆ ಹಾಗೂ ಔಷಧಿ ವಿತರಣೆ ಕಾರ್ಯಕ್ರಮ ಸುಧಾಕರ ಕಬಾಡಿ ಇವರಿಂದ ನೆರವೇರುವುದು.

ಸಾಯಂಕಾಲ 7 ಗಂಟೆಗೆ ಎಸ್‌ಎಸ್‌ಕೆ ಸಮಾಜದ ದಂಪತಿಗಳಿಗಾಗಿ 'ಆದರ್ಶ ದಂಪತಿ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಬೆಟಗೇರಿ ಎಸ್‌ಎಸ್‌ಕೆ ದಸರಾ ಉತ್ಸವ ಸಮಿತಿ ಚೇರಮನ್ ನಾರಾಯಣಸಾ ಕಬಾಡಿ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಗುಡೂರಿನ ಉದ್ಯಮಿ ಕೃಷ್ಣಾ ಹಾದಿಮನಿ, ವೀನಾ ಕೃಷ್ಣಾಸಾ ಹಾದಿಮನಿ, ಗಜೇಂದ್ರಗಡದ ಉದ್ಯಮಿ ವಿಷ್ಣು ಖೋಡೆ, ಅಪರ್ಣಾ ವಿಷ್ಣುಸಾ ಖೋಡೆ, ಗದುಗಿನ ಉದ್ಯಮಿ ಶ್ರೀನಿವಾಸ ಖೋಡೆ, ಜ್ಯೋತಿ ಶ್ರೀನಿವಾಸ ಖೋಡೆ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ದಸರಾ-ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಮಹೇಶ್ವರ ಸ್ವಾಮೀಜಿ ಅಭಿಮತ

## ಶ್ರೀದೇವಿಯ ಪುರಾಣ ದೇಹದ ಪುರಾಣವಾಗಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ದಸರಾ ಮಹೋತ್ಸವದ ಸಂದರ್ಭದಲ್ಲಿ ಸರ್ವ ಭಕ್ತಾಧಿಕಗಳು ಶ್ರೀದೇವಿ ಪುರಾಣ ಪಠಿಸುವ ಮೂಲಕ ದೇವಿಯ ಮಹಿಮೆ, ಲೀಲೆಗಳನ್ನು ಅರಿತುಕೊಳ್ಳುವ, ದೇವಿಯನ್ನು ಒಲಿಸಿಕೊಂಡು ಸಂಕಲ್ಪ ಸಿದ್ಧಿಸಿಕೊಳ್ಳಬೇಕಿದೆ. ದೇವಿ ಪುರಾಣ-ದೇಹದ ಪುರಾಣ ಆಗಿದೆ ಎಂದು ಗದುಗಿನ ಅಡವೀಂದ್ರ ಸ್ವಾಮಿ ಮಠದ ಧರ್ಮದರ್ಶಿ ಪೂಜ್ಯ ಮಹೇಶ್ವರ ಸ್ವಾಮೀಜಿ ಹೊಸಳ್ಳಿಮಠ ಹೇಳಿದರು.



ಅವರು ಗದುಗಿನ ಅಡವೀಂದ್ರಸ್ವಾಮಿ ಮಠದ ಅನ್ನಪೂರ್ಣೇಶ್ವರಿ ಮಂದಿರದಲ್ಲಿ ನಡೆದ ದಸರಾ-ಜಾತ್ರಾ ಮಹೋತ್ಸವದ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು.

ಅಡವೀಂದ್ರ ಸ್ವಾಮಿ ಮಠ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದೆ. ಶಮಿ, ಆರಿ, ಬಿಲ್ವ ವೃಕ್ಷಗಳ ತ್ರಿವೇಣಿ ಸಂಗಮದಲ್ಲಿ ಪ್ರತಿಷ್ಠಾಪನೆಗೊಂಡಿರುವ ಜಗನ್ಮಾತೆ ಅನ್ನಪೂರ್ಣೇಶ್ವರಿ ದೇವಿ ಸರ್ವರಿಗೂ ಸನ್ಮಂಗಲವನ್ನುಂಟು ಮಾಡುತ್ತಿದ್ದಾಳೆ.

> **ಅಡವೀಂದ್ರಸ್ವಾಮಿ ಮಠ ದೇವಿ ಆರಾಧನೆಯ ಶೃದ್ಧಾ ಕೇಂದ್ರವಾಗಿ ಬಹು ವರ್ಷಗಳಿಂದ ಜನತೆಯಲ್ಲಿ ಧರ್ಮ ಜಾಗೃತಿ, ವೈಚಾರಿಕತೆ ಮೂಡಿಸುವ ಮೂಲಕ ಶಿವಾನುಭವ ಗೋಷ್ಠಿ ಕಾರ್ಯಕ್ರಮದಿಂದ ಜನಸಮುದಾಯವನ್ನು ಸನ್ಮಾರ್ಗದೆಡೆಗೆ ಮುನ್ನಡೆಸುವ ಕಾರ್ಯ ಮಾಡುತ್ತಿದೆ.**
>
> **-ವಿವೇಕಾನಂದಗೌಡ ಪಾಟೀಲ**
> **ಕಸಾಪ ಅಧ್ಯಕ್ಷರು**

▶▶3ನೇ ಪುಟಕ್ಕೆ

## ದುರ್ಗುಣಗಳನ್ನು ಬಿಟ್ಟು ಸದ್ಗುಣಗಳನ್ನು ಬೆಳೆಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗದಗ

ಮನುಷ್ಯ ಸಂಘ ಜೀವಿ, ಒಂಟಿಯಾಗಿ ಬದುಕಲು ಸಾಧ್ಯವಿಲ್ಲ. ಆದ್ದರಿಂದ, ಒಬ್ಬರಿಗೊಬ್ಬರು ದ್ವೇಷ ಮಾಡದೆ ಪ್ರೀತಿ ವಾತ್ಸಲ್ಯದಿಂದ ಬಾಳಿದಾಗ ಮಾತ್ರ ಮನುಷ್ಯನಾಗಲು ಸಾಧ್ಯ ಎಂದು ಕಳಸಾಪೂರ, ಸೊರಟೂರು ಓಂಕಾರೇಶ್ವರ ಹಿರೇಮಠದ ಫಕೀರೇಶ್ವರ ಮಹಾಸ್ವಾಮಿಗಳು ನುಡಿದರು.



ನಗರದ ಶ್ರೀ ದುರ್ಗಾದೇವಿ ಯುವಕ ಮಂಡಳ ಒಕ್ಕಲಗೇರಿ ಓಣಿಯ ವತಿಯಿಂದ ನವರಾತ್ರಿ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಶ್ರೀ ದುರ್ಗಾದೇವಿಗೆ ವಿಶೇಷ ಪೂಜೆ, ಮಹಾ ಅನ್ನಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನವರಾತ್ರಿಗೆ ತನ್ನದೇ ಆದ ವಿಶೇಷತೆ ಇದೆ. ದುರ್ಗಾದೇವಿ ದುಷ್ಟರ ಸಂಹಾರ, ಶಿಷ್ಟರ ರಕ್ಷಣೆ ಮಾಡಿದ ದ್ಯೋತಕವಾಗಿ ವಿಜಯ ದಶಮಿ ಆಚರಿಸಲಾಗುತ್ತಿದೆ. ತಾವೆಲ್ಲರೂ ದುರ್ಗುಣಗಳನ್ನು ಬಿಟ್ಟು ಸದ್ಗುಣಗಳನ್ನು ಬೆಳಸಿಕೊಂಡಾಗ ಮಾತ್ರ ಒಳ್ಳೆಯ ಬದುಕು ಸಾಗಿಸಲು ಸಾಧ್ಯ. ಮಹಾ ಅನ್ನಸಂತರ್ಪಣೆ ಮಾಡಿರುವದು ಉತ್ತಮ ಕಾರ್ಯವಾಗಿದೆ. ಅನ್ನದ ಅಗಳು ಕೆಡಿಸದಂತೆ ಪ್ರಸಾದ ತೆಗೆದುಕೊಳ್ಳಿ ಎಂದರು.


ಸಾವಿರಾರು ಭಕ್ತರು ಪ್ರಸಾದ ಸೇವಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ದುರ್ಗಾದೇವಿ ಯುವಕ ಮಂಡಳಿಯ ಅಧ್ಯಕ್ಷ ಎಂ.ಬಿ ತುಕ್ಕಪ್ಪನವರ, ಉತ್ಸವ ಸಮಿತಿ ಅಧ್ಯಕ್ಷ ಮಹೇಶ ರೋಖಡೆ, ಬಸವರಾಜ ಮಡಿವಾಳರ, ನಾಗರಾಜ ಮೆಣಸಗಿ, ರವಿ ಜೋಗಿನ, ಪ್ರದೀಪ್ ಯಲಿಗಾರ, ಮಂಜುನಾಥ ಲಕ್ಕುಂಡಿ, ರಾಜು ಜಕ್ಕನಗೌಡ್ರ, ಯಂಕಪ್ಪ ಹೆಬಸೂರ, ರವಿ ಓಬಾಜಿ, ದೇವೆಂದ್ರ ದೊಡ್ಮನಿ, ಶಿವಾಜಿ ತುಕ್ಕಪ್ಪನವರ, ಕುಮಾರ ಯಲಿಗಾರ, ಶಂಕರ ಓಬಾಜಿ, ಬಸವರಾಜ ರೋಣದ, ಪ್ರಭು ವಸ್ತ್ರದ, ವಿರೂಪಾಕ್ಷಪ್ಪ ಹೆಬ್ಬಳ್ಳಿ ಮುಂತಾದವರಿದ್ದರು.

## ಹೋಮ-ಹವನಗಳಲ್ಲಿ ಅಪಾರ ಶಕ್ತಿ ಅಡಗಿದೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ವಿಶ್ವಕರ್ಮ ಸಮಾಜದ ವತಿಯಿಂದ ಇಲ್ಲಿನ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ನವರಾತ್ರಿ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ನಿತ್ಯ ವಿಶೇಷ ಪೂಜೆ ಮತ್ತು ಆದಿತ್ಯಾಚಾರ್ಯ ಬಡಿಗೇರ ಇವರಿಂದ ಪುರಾಣ ಪ್ರವಚನ ನಡೆಯುತ್ತಿದೆ.

ಶುಕ್ರವಾರ ವೇ.ಮೂ ಶ್ರೀಪಾದಆಚಾರ್ ಗುರೂಜಿ ಅವರ ನೇತೃತ್ವದಲ್ಲಿ ವಿಶ್ವಶಾಂತಿಗಾಗಿ ದುರ್ಗಾಸಪ್ತಶತಿ ಹೋಮ ಹಮ್ಮಿಕೊಳ್ಳಲಾಗಿತ್ತು. ಅಷ್ಟದಿಕ್ಪಾಲಕರ, ಪಂಚಭೂತ, ನವಗ್ರಹ, ಮೃತುಂಜಯ, ಪಂಚಬ್ರಹ್ಮ ಹೋಮ ಹವನಾದಿಗಳನ್ನು ನೆರವೇರಿಸಲಾಯಿತು.



ಈ ವೇಳೆ ಗುರೂಜಿಯವರು ಮಾತನಾಡಿ, ಹೋಮ ಕೇವಲ ಸಾಂಪ್ರದಾಯಿಕ ಆಚರಣೆಯಲ್ಲ. ಅದರಲ್ಲಿ ಅಪಾರ ಶಕ್ತಿ ಅಡಗಿದೆ. ಹೋಮದಿಂದ ಹೊರಹೊಮ್ಮುವ ಧನಾತ್ಮಕ ಶಕ್ತಿಯಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಮನೆಯಲ್ಲಿದ್ದ ನಕಾರಾತ್ಮಕ ಶಕ್ತಿಗಳು ನಾಶವಾಗಿ ಸಕಾರಾತ್ಮಕ ಶಕ್ತಿಯು ನೆಲೆಸುತ್ತದೆ. ದುಷ್ಟ ಶಕ್ತಿಗಳು ಮನೆ-ಮನ ಪ್ರವೇಶಿಸದಂತೆ ರಕ್ಷಿಸುತ್ತದೆ. ಹೋಮ ನಡೆಸಿದ ಸುತ್ತಲಿನ ಪರಿಸರದಲ್ಲಿ ರೋಗಾಣು, ನಂಜುಕಾರಕ ಜಂತುಗಳು ಹಾಗೂ ಅನಾರೋಗ್ಯ ಸೃಷ್ಟಿಸುವ ಸೂಕ್ಷ್ಮ ಜೀವಿಗಳ ನಾಶದೊಂದಿಗೆ ಪಾಪ ಕರ್ಮಗಳು ಕಳೆದು ಮನಃಶಾಂತಿ, ನೆಮ್ಮದಿ ಪ್ರಾಪ್ತವಾಗುತ್ತದೆ. ಈ ನಿಟ್ಟಿನಲ್ಲಿ ಹೋಮ ಹವನಗಳಲ್ಲಿ ಭಕ್ತಿ-ಶ್ರದ್ಧೆಯಿಂದ ಪಾಲ್ಗೊಳ್ಳಬೇಕು ಎಂದರು.

ಶ್ರೇಷ್ಠ ವಾಸ್ತು ತಜ್ಞ ಆರ್.ವ್ಹಿ ಕಮ್ಮಾರ, ಮೋಹನ ಸುತಾರ, ಎಂ.ಜೆ ಬಾಲೆಹೊಸೂರು, ಅಶೋಕ ಸೊರಟೂರ, ಅಶೋಕ ಬಾದರಬಂಡಿ, ಶ್ರೀಧರ ಪತ್ತಾರ, ಬಾಸ್ಕರ್ ಸೊರಟೂರ, ಮಕರಂದ ಹುಲಬಜಾರ, ಮೌನೇಶ ಬಾಲೇಹೊಸೂರ, ಚಂದ್ರಶೇಖರ ಸಿಂಗಟಾಲೂರ, ಶ್ರೀಪತಿ ಸಿಂಗಟಾಲೂರ, ಮಹಾದೇವಪ್ಪ ಹುಲಗೂರ, ಶ್ರೀಕಾಂತ ಪತ್ತಾರ, ಮಾನಪ್ಪ ಪತ್ತಾರ, ಮಹಿಳಾ ಸಂಘದ ಅಧ್ಯಕ್ಷ ಪ್ರೇಮಕ್ಕ ಬಡಿಗೇರ ಮುಂತಾದವರಿದ್ದರು.

## ಸಾಕ್ಷಿ ಸುಭಾಷಿತ

ಸಾಧ್ಯವಾದರೆ ಹತ್ತು ಜನರಿಗೆ ನೆರವಾಗು, ಆಗದಿದ್ದರೆ ಹಾದಿಯಲ್ಲಿ ಕಾಣುವ ಗಾಜಿನ ಚೂರನ್ನಾದರೂ ಹೆಕ್ಕಿ ಕಸದ ತೊಟ್ಟಿಗೆ ಹಾಕು.

–ಕಣ್ಣದಾಸನ್

# ಜನರ ಸಮಸ್ಯೆಗಳಿಗೆ ಸ್ಪಂದಿಸಿದ ಜಿಲ್ಲಾಧಿಕಾರಿ




■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಶುಕ್ರವಾರ ನಡೆದ ಜನತಾ ದರ್ಶನದಲ್ಲಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಜನರ ಅಹವಾಲು, ಸಮಸ್ಯೆಗಳನ್ನು ಸಹನೆ, ಕಾಳಜಿಯಿಂದ ಆಲಿಸಿ, ಜನರ ಪ್ರತಿಯೊಂದು ಮನವಿಗೂ ಸಕಾರಾತ್ಮಕವಾಗಿ ಸ್ಪಂದಿಸಿ, ಉತ್ತಮ ಆಡಳಿತ ಮತ್ತು ಸಮಸ್ಯೆ ಪರಿಹಾರದ ಭರವಸೆ ಮೂಡಿಸಿದರು. ಶಾಸಕ ಎನ್.ಎಚ್ ಕೋನರಡ್ಡಿ ಅವರು ಜಿಲ್ಲಾಧಿಕಾರಿಗಳಿಗೆ ಸಾಥ್ ನೀಡಿ, ಸಮಸ್ಯೆಗಳ ತ್ವರಿತ ಪರಿಹಾರಕ್ಕೆ ಸಲಹೆ, ಸೂಚನೆ ನೀಡಿದರು.

ಜನತಾ ದರ್ಶನದಲ್ಲಿ ಭದ್ರಾಪುರ, ನಲವಡಿ, ಶಲವಡಿ, ಹಳ್ಳಿಕೇರಿ, ಅಡ್ನೂರ, ಕಿತ್ತೂರ, ಬಸಾಪುರ, ಮಜ್ಜಿಗುಡ್ಡ ಸೇರಿದಂತೆ ಅಣ್ಣಿಗೇರಿ ತಾಲೂಕಿನ ಸುಮಾರು 12 ಹಳ್ಳಿಗಳ ಸಾರ್ವಜನಿರು ಭಾಗವಹಿಸಿ ತಮ್ಮ ವಯಕ್ತಿಕ ಹಾಗೂ ಗ್ರಾಮದ ಸಮಸ್ಯೆಗಳ ಕುರಿತು ಅಹವಾಲು, ಮನವಿಗಳನ್ನು ಸಲ್ಲಿಸಿದರು.


ಜನತಾ ದರ್ಶನದಲ್ಲಿ ಸುಮಾರು 40ಕ್ಕೂ ಹೆಚ್ಚು ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ಸ್ಥಳೀಯವಾಗಿ ಪರಿಹರಿಸಿದರು. ಸಲ್ಲಿಕೆಯಾದ ಉಳಿದ ಅಹವಾಲುಗಳನ್ನು ನಿಯಮಾನುಸಾರ ಪರಿಶೀಲಿಸಿ, ಹಂತಹಂತವಾಗಿ ಪರಿಹರಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಕಾರ್ಯಕ್ರಮದಲ್ಲಿ ಸುಮಾರು 105 ಅರ್ಜಿಗಳನ್ನು ಸಾರ್ವಜನಿಕರು ಸಲ್ಲಿಸಿದ್ದರು. ಅದರಲ್ಲಿ ಕಂದಾಯ ಇಲಾಖೆ, ಪುರಸಭೆ ಹಾಗೂ ಇತರ ಇಲಾಖೆಗಳಿಗೆ ಸಂಭಂದಿಸಿದ ಅರ್ಜಿಗಳಿದ್ದವು. ಸಾರ್ವಜನಿಕ ಅರ್ಜಿಗಳನ್ನು ಮುಂದಿನ ಕ್ರಮಕ್ಕಾಗಿ ಆಯಾ ಇಲಾಖೆಗಳ ಅಧಿಕಾರಿಗಳಿಗೆ ಕಳುಹಿಸಿ, ಅವರಿಂದ ಉತ್ತರ ಪಡೆದು ಜನತಾ ದರ್ಶನದಲ್ಲಿ ನೀಡಲಾಯಿತು. ಸರಕಾರದ ಮಟ್ಟದಲ್ಲಿ ನಿರ್ಣಯವಾಗಬೇಕಾದ ಅರ್ಜಿಗಳನ್ನು ಸೂಕ್ತ ಶಿಫಾರಸ್ಸುಗಳೊಂದಿಗೆ ಸರಜಾರದ ಸಂಬಂಧಿಸಿದ ಇಲಾಖೆಗೆ ಕಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಅವರು ತಿಳಿಸಿದರು.

ವಿವಿಧ ಇಲಾಖೆಗಳ ಕುಂದು-ಕೊರತೆಗಳ ಅರ್ಜಿಗಳನ್ನು IPGRS ಮೂಲಕ ನೋಂದಣಿ ಮಾಡಿಸಿಕೊಳ್ಳಲಾಯಿತು. ಅಹವಾಲು ಸ್ವೀಕರಿಸಲು ತಹಸಿಲ್ದಾರ ಶಿವಾನಂದ ಹೆಬ್ಬಳ್ಳಿ ಅವರ ನೇತೃತ್ವದಲ್ಲಿ ವಿವಿಧ ಅಧಿಕಾರಿ, ಸಿಬ್ಬಂದಿಗಳು ಆನ್‌ಲೈನ್ ಎಂಟ್ರಿ ಹಾಗೂ ಆಯಾ ಇಲಾಖೆ ಅಧಿಕಾರಿಗಳಿಗೆ ತಲುಪಿಸಲು ಕ್ರಮವಹಿಸಿದ್ದರು.



■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ನವರಾತ್ರಿ ಉತ್ಸವದ 6ನೇ ದಿನದ ಸಂಕೇತವಾದ ಹಸಿರು ಬಣ್ಣದ ಸೀರೆಗಳನ್ನು ಉಟ್ಟು, ಶುಕ್ರವಾರ ಬೆಟಗೇರಿಯ ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ಶ್ರೀ ಶಕ್ತಿ ದೇವಿಯ ಸದ್ಭಕ್ತರಾದ ದೀಪಾ ಬದಿ ಅವರ ಸ್ನೇಹ ಬಳಗ ದರ್ಶನವನ್ನು ಪಡೆದು ಪುನೀತರಾದರು.



■ವಿಜಯಸಾಕ್ಷಿ ಸುದ್ದಿ, ಹುಲಕೋಟಿ

ನವರಾತ್ರಿ ಉತ್ಸವದ 6ನೇ ದಿನದ ಸಂಕೇತ ಸಾರುವ ಹಸಿರು ಬಣ್ಣದ ಸೀರೆಗಳನ್ನು ಉಟ್ಟು ಸಂಭ್ರಮಿಸಿದ ಹುಲಕೋಟಿಯ ಆರ್‌ಟಿಇ ಸೊಸೈಟಿಯ ಗ್ರಾಮೀಣ ಇಂಜಿನಿಯರಿಂಗ್ ಮಹಾವಿದ್ಯಾಲಯದ ಸಿಬ್ಬಂದಿಗಳು.


## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545


### ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ತೊಟ್ಟಿಲು ತೂಗುವ ಕೈಗೆ ಜಗವನ್ನು ಬೆಳಗುವ ಶಕ್ತಿಯಿದೆ

■ವಿಜಯಸಾಕ್ಷಿ ಸುದ್ದಿ, ಲಿಂಗಸುಗೂರು,

ಹೆಣ್ಣು ಮಕ್ಕಳ ಆದರ್ಶ ಗುಣಗಳಿಂದ ಭಾರತೀಯ ಸಂಸ್ಕೃತಿ ಉಳಿದು-ಬೆಳೆದು ಬಂದಿದೆ. ಜೀವನ ಸಮೃದ್ಧಿಗೆ ಶಾಂತಿ-ಸಹನೆಗೆ ಮಹಿಳೆಯರು ಕೊಟ್ಟ ಕೊಡುಗೆ ಅಪಾರವಾಗಿದೆ ಎಂದು ಬಾಳೆಹೊನ್ನೂರು ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 5ನೇ ದಿನದ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಶರನ್ನವರಾತ್ರಿಯಲ್ಲಿ ಶಕ್ತಿಯ ಆರಾಧನೆ ಶ್ರೇಷ್ಠವಾಗಿದೆ. ಅರಿವುಳ್ಳವರಿಗೆಲ್ಲ ಶಕ್ತಿಯೇ ಮೂಲ ಎಂಬುದನ್ನ ಮರೆಯುವಂತಿಲ್ಲ. ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಮಹಿಳೆಯರಿಗೆ ಸ್ವಾತಂತ್ರ್ಯ ನೀಡಿದ ಮೊಟ್ಟ ಮೊದಲ ಧರ್ಮ ವೀರಶೈವ ಎಂಬುದನ್ನು ಮರೆಯಲಾಗದು. ಇದಕ್ಕೆ ಸರಿ ಸಮಾನವಾದ ವಸ್ತು ಈ ಜಗತ್ತಿನಲ್ಲಿ ಇನ್ನೊಂದಿಲ್ಲ. ಮನುಷ್ಯ ಹಣ ಮತ್ತು ಅಧಿಕಾರದ ಬಗ್ಗೆ ಸದಾ ಚಿಂತಿಸುವನು. ಆದರೆ ತನ್ನ ದೇಶ, ಸಂಸ್ಕೃತಿ ಮತ್ತು ಧರ್ಮದ ಬಗ್ಗೆ ಚಿಂತಿಸಲಾರ. ಸಿರಿ ಸಂಪದ ಗಳಿಸಲು ಬೇಕಾದಷ್ಟು ಸಮಯವಿದೆ. ಆದರೆ ಆಧ್ಯಾತ್ಮ ಸಾಧನೆಗೆ ಮತ್ತು ಭಗವಂತನ ಸ್ಮರಣೆಗೆ ಮಾತ್ರ ಸಮಯವಿಲ್ಲದಾಗಿದೆ ಎಂದರು.



'ಶ್ರೀ ಗುರುಗುಂಟ ಅಮರೇಶ್ವರ ಚರಿತ್ರೆ' ಬಿಡುಗಡೆ ಮಾಡಿದ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್ ಈಶ್ವರಪ್ಪ ಮಾತನಾಡಿ, ನಮ್ಮಲ್ಲಿರುವ ಸಮಾಧಾನ-ಶಾಂತಿ ವಿದೇಶದಲ್ಲಿ ಸಿಗುವುದಿಲ್ಲ. ಇದು ನಮ್ಮ ದೇಶದ ಸಂಸ್ಕೃತಿ. ನಾಡು ಶಾಂತಿಯ ತೋಟವಾಗಬೇಕೆಂಬ ಪ್ರಯತ್ನ ಜಗದ್ಗುರುಗಳದು. ಪೂಜ್ಯ ಜಗದ್ಗುರುಗಳ ಕಳಕಳಿಯ ಪ್ರಯತ್ನಕ್ಕೆ ನಾವು ಕಿಂಚಿತ್ತಾದರೂ ಸ್ಪಂದಿಸಬೇಕು. ಚಂದ್ರಯಾನ ಮಾಡಿ ಜಗತ್ತಿನ ಯಾರೂ ಮಾಡದ ಸಾಧನೆಯನ್ನು ನಮ್ಮ ವಿಜ್ಞಾನಿಗಳು ಮಾಡಿದ್ದಾರೆ ಎಂದರು.

ತುಮಕೂರಿನ ಡಾ. ಮೀನಾಕ್ಷಿ ಖಂಡಿಮಠ ಮಾತನಾಡಿ, ಮಹಿಳೆಯರ ಮೇಲೆ ನಡೆಯುವ ನಿರಂತರ ದೌರ್ಜನ್ಯಗಳು, ಅತ್ಯಾಚಾರಗಳು ನಿಲ್ಲಬೇಕು. ಎಲ್ಲಿ ಹೆಣ್ಣು ಮಕ್ಕಳಿಗೆ ಗೌರವ ಇದೆಯೋ ಅಲ್ಲಿ ದೇವರುಗಳು ನೆಲೆಸಿರುತ್ತಾರೆ ಎಂಬ ಮಾತಿದೆ. ಸ್ತ್ರೀ ಭ್ರೂಣ ಹತ್ಯೆಯಿಂದಾಗಿ ಜನನ ಪ್ರಮಾಣ ಕಮ್ಮಿಯಾಗಿ ಸಮಾಜದಲ್ಲಿ ಗೊಂದಲಗಳು ಉಂಟಾಗುತ್ತಿವೆ. ಗಂಡಾಗಲಿ, ಹೆಣ್ಣಾಗಲಿ ಹುಟ್ಟಿದ ಮಕ್ಕಳಲ್ಲಿ ತಾರತಮ್ಯ ತೋರಬಾರದೆಂದರು.

ರಾಯಚೂರು ಜಿಲ್ಲೆ ಮಸ್ಕಿಯ ಸಾಹಿತಿ ಡಾ. ಚನಬಸಯ್ಯ ಹಿರೇಮಠರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು 'ಸಾಹಿತ್ಯ ಸಿರಿ' ಮತ್ತು ಇಸ್ರೋ ವಿಜ್ಞಾನಿ ಡಾ. ಬಿ.ಹೆಚ್.ಎಂ. ದಾರುಕೇಶ್ ಇವರಿಗೆ 'ವಿಜ್ಞಾನ ವಿಭೂಷಣ' ಪ್ರಶಸ್ತಿಯಿತ್ತು ಶ್ರೀ ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು. ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಹಾಗೂ ಮಳಲಿ ಡಾ.ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ವಾಚನ ಮಾಡಿದರು.

ಮಾಜಿ ಶಾಸಕ ಅಮರೇಗೌಡ ಪಾಟೀಲ ಬಯ್ಯಾಪುರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶಾಸಕ ಮಾನಪ್ಪ ಡಿ.ವಜ್ಜಲ ಉಪಸ್ಥಿತರಿದ್ದರು. ದೇವದುರ್ಗದ ಕಪಿಲ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಮಾತನಾಡಿದರು. ಜಾಲಹಳ್ಳಿ ಬೃಹನ್ಮಠದ ಜಯಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು. ದೇವರಭೂಪುರ ಬೃಹನ್ಮಠದ ಅಭಿನವ ಗಜದಂಡ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ರಾಯಚೂರು ಕಿಲ್ಲಾ ಬೃಹನ್ಮಠದ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕ ನುಡಿದರು.

ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳನ್ನು ಮೊದಲ್ಗೊಂಡು ಹುಡುಗಿ, ಹಲಗೂರು, ಸಂಗೊಳ್ಳಿ, ರೌಡಕುಂದ, ಶೇಕಾಪುರ, ಸಿಂದಗಿ ಶ್ರೀಗಳು ನಂದಿಕೇಶ್ವರಿ ಮಾತಾಜಿ ವೇದಿಕೆಯ ಮೇಲೆ ಇದ್ದರು.

ದಿ.ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ದಾವಣಗೆರೆ ಅಧ್ಯಕ್ಷ ಎಸ್.ಎ ಮುರುಗೇಶ, ಡಾ. ಬಸವರಾಜ ಪಂ.ಹಿರೇಮಠ ಸಂಗೊಳ್ಳಿ, ಎಮ್.ಬಿ ಹಿರೇಮಠ ಬೈಲಹೊಂಗಲ ಇವರಿಗೆ ರಂಭಾಪುರಿ ಜಗದ್ಗುರುಗಳು ಗುರುರಕ್ಷೆ ನೀಡಿ ಆಶೀರ್ವದಿಸಿದರು.

ಲಿಂಗಸುಗೂರಿನ ಶಿವಮ್ಮ ಪಟ್ಟದಕಲ್ಲು ಸ್ವಾಗತಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ, ವಿಶ್ವೇಶ್ವರಯ್ಯ ಹಿರೇಮಠ ಲಿಂಗಸುಗೂರು, ಮಲ್ಲಿಕಾರ್ಜುನ ಹೂಗಾರ ಗದಗ ಹಾಗೂ ಷಣ್ಮುಖಯ್ಯ ಹಿರೇಮಠ ಕಂಚಿನೆಗಳೂರು ಇವರಿಂದ ಭಕ್ತಿಗೀತೆ ಮತ್ತು ಶಿವಮೊಗ್ಗದ ಶಾಂತಾ ಆನಂದ ಇವರಿಂದ ನಿರೂಪಣೆ ನಡೆಯಿತು. ಕಾರ್ಯಕ್ರಮದ ಕೊನೆಗೆ ಶಿವಾಚಾರ್ಯ ಬಳಗ, ಶ್ರೀ ಪೀಠದ ಸಿಬ್ಬಂದಿ ವರ್ಗ, ಪೀಠಾಭಿಮಾನಿಗಳು ನಂತರ ಹಗಲು ದೀವಟಿಗೆಯ ಮೇಘರಾಜ ಚಕ್ರಸಾಲಿ ನಜರ್ ಸಮರ್ಪಿಸಿದರು. ಮಳಲಿಯ ಡಾ.ನಾಗಭೂಷಣ ಶಿವಾಚಾರ್ಯರು ನಿರೂಪಿಸಿದರು.

### ರೋಣ ತಾಲ್ಲೂಕು ಯಾವಗಲ್ ಗ್ರಾಮದಲ್ಲಿ ಛಲವಾದಿ ಮಹಾಸಭಾ ಗ್ರಾಮಘಟಕ ಉದ್ಘಾಟನೆ

# ಸಮಾಜ ಸಂಘಟಿಸಲು ಮನಸ್ಸು ಶುದ್ಧಿಯಾಗಿರಬೇಕು: ಕಡೇಮನಿ



■ವಿಜಯಸಾಕ್ಷಿ ಸುದ್ದಿ, ರೋಣ

ಛಲವಾದಿ ಸಮಾಜ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಾಗೂ ಸಮಾಜಿಕವಾಗಿ ಅತಿ ಹಿಂದುಳಿದ ಸಮಾಜವಾಗಿದ್ದು, ಸಮಾಜದ ಮುಖ್ಯವಾಹಿನಿ ತಲುಪಲು ಸಂಘಟಿತರಾಗಬೇಕಾದ ಅವಶ್ಯಕತೆ ಇದೆ. ಇಂಥಹ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಮನಸ್ಸು ಶುದ್ಧಿಯಾಗಿರಬೇಕು ಎಂದು ಸಮಾಜದ ಹಿರಿಯ ಮುಖಂಡ ಬಸವರಾಜ ಕಡೇಮನಿ ಅಭಿಪ್ರಾಯಪಟ್ಟರು.

ಶುಕ್ರವಾರ ತಾಲ್ಲೂಕಿನ ಯಾವಗಲ್ ಗ್ರಾಮದಲ್ಲಿ ಛಲವಾದಿ ಮಹಾಸಭಾ ಗ್ರಾಮಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಸಂಘಟಿತವಾದ ಮಾತ್ರ ನಾವು ಏನನ್ನಾದರೂ ಸಾಧಿಸಲು ಸಾಧ್ಯ. ಈ ಸಂಘಟಿತ ಹೋರಾಟದಲ್ಲಿ ತೊಡಗಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯೂ ಸಹ ಶುದ್ಧ ಮನಸ್ಸಿನಿಂದ ಹೋರಾಟದಲ್ಲಿ ಭಾಗಿಯಾದಾಗ ಮಾತ್ರ ನಾವು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಸಾಧ್ಯ ಎಂದು ಅವರು ತಿಳಿಸಿದರು.

ಮಹಾಸಭಾದ ಮಾಜಿ ಅಧ್ಯಕ್ಷ ಪ್ರಕಾಶ ಕಾಳೆ ಅವರು ಮಾತನಾಡಿ, ಶೈಕ್ಷಣಿಕವಾಗಿ ಮೊದಲು ಮುಂದುವರೆಯಬೇಕಾಗಿದೆ. ಈ ಅಕ್ಷರ ಅರಿವು ನಮ್ಮಲ್ಲಿ ಜಾಗೃತಿ, ಸಂವಿಧಾನಬದ್ಧ ಹಕ್ಕು ಪಡೆಯಲು ಆಸರೆಯಾಗುತ್ತದೆ. ಜತೆಗೆ, ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ, ಮುಂಚೂಣಿಯಲ್ಲಿರಲು ನಮ್ಮನ್ನು ಪ್ರೇರೇಪಿಸುತ್ತದೆ. ಮುಂದುವರೆದ ಸಮುದಾಯದ ಜತೆ, ನಾವು ಗುರುತಿಸಿಕೊಳ್ಳಲು ಶಿಕ್ಷಣ ಒಂದೇ ನಮ್ಮ ಮುಂದಿರುವ ಆಯ್ಕೆ ಎಂದರು.

ಛಲವಾದಿ ಮಹಾಸಭಾದ ಜಿಲ್ಲಾಘಟಕದ ಅಧ್ಯಕ್ಷ ಆನಂದ ಶಿಂಗಾಡಿ, ನೌಕರ ಸಂಘದ ಜಿಲ್ಲಾಧ್ಯಕ್ಷ ವಸಂತ ಕಲಕಂಬಿ, ರೋಣ ಹಾಗೂ ಗಜೇಂದ್ರಗಡ ತಾಲೂಕಿನ ಅಧ್ಯಕ್ಷ ಸಂಜಯ ದೊಡ್ಡಮನಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಾಸ್ತಾವಿಕವಾಗಿ ಮುಖಂಡ ಶರೀಪ ಬಿಳೆಯಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಾಮ ಘಟಕದ ಅಧ್ಯಕ್ಷರನ್ನಾಗಿ ಮಂಜುನಾಥ ನಿಂಗಪ್ಪ ಹೆಬಸೂರ, ಉಪಾಧ್ಯಕ್ಷರಾಗಿ ಗಿರೀಶ ಫಕೀರಪ್ಪ ತಾಳದವರ, ಪ್ರಧಾನ ಕಾರ್ಯದರ್ಶಿಯಾಗಿ ಮುತ್ತು ದಿಂಡೆಣ್ಣವರ, ಸಹ ಕಾರ್ಯದರ್ಶಿಯಾಗಿ ಮಂಜುನಾಥ ದೀಪಾಲಿ, ಖಜಾಂಚಿಯಾಗಿ ಎಂ.ಎಸ್. ದೀಪಾಲಿ ಆಯ್ಕೆಯಾದರು.

ಗ್ರಾಮದ ಹಿರಿಯರಾದ ಗದಿಗೆಪ್ಪ ಕಡಿಯವರ, ದೇವೇಂದ್ರಪ್ಪ ಕೊಳ್ಳಪ್ಪನವರ, ರೋಣ ತಾಲೂಕ ಯುವ ಘಟಕದ ಅಧ್ಯಕ್ಷ ಭರಮಪ್ಪ ಕೊಳ್ಳಪ್ಪನವರ, ಮುಂಡರಾದ ಶಿವಪ್ಪ ಹೆಬಸೂರ, ಮಹಾದೇವಪ್ಪ ಹುಲ್ಲೂರ, ನಿಂಗಪ್ಪ ಕೊಳ್ಳಪ್ಪನವರ, ಹನುಮಂತಪ್ಪ ತಾಳದವರ, ಸಂಗನಬಸಪ್ಪ ದೀಪಾಲಿ, ಶಿವಪ್ಪ ಕೊಳ್ಳಪ್ಪನವರ, ಫಕೀರಪ್ಪ ಛಲವಾದಿ, ಶೇಖಪ್ಪ ತಾಳದವರ, ಬಸವರಾಜ ಅಗಸಿಮನಿ, ಮಲ್ಲಪ್ಪ ಕಾಳಿ, ಗಿರೀಶ ಛಲವಾದಿ, ಶಿವು ಕಾಳಿ, ನಿಂಗಪ್ಪ ತಾಳದವರ, ಪ್ರಕಾಶ ಕೊಳ್ಳಪ್ಪನವರ, ನಿಂಗರಾಜ ಛಲವಾದಿ, ವಿರೂಪಾಕ್ಷಪ್ಪ

# ಆದರ್ಶ ಶಿಕ್ಷಕನಿಗೆ ಪ್ರಶಸ್ತಿಯ ಅಗತ್ಯವಿಲ್ಲ



■ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚೆಗೆ ಬೆಳ್ಳಟ್ಟಿ ಜಗದ್ಗುರು ಫಕ್ಕೀರೇಶ್ವರ ಪ್ರೌಢಶಾಲೆಯಲ್ಲಿ 2000-2001ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಂದ ಗುರುವಂದನೆ ಹಾಗೂ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಬೆಳ್ಳಟ್ಟಿಯ ಎಪಿಎಂಸಿ ಸಭಾಭವನದಲ್ಲಿ ಆಯೋಜಿಸಲಾಗಿತ್ತು.

ಸಮಾವೇಶದಲ್ಲಿ 9 ಜನ ಶಿಕ್ಷಕರು ಹಾಗೂ 80 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಅಧ್ಯಕ್ಷತೆ ವಹಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಿವೃತ್ತ ಶಿಕ್ಷಕ ಬಿ.ಎಂ ಯರಕದ ಮಾತನಾಡಿ, ಒಬ್ಬ ಆದರ್ಶ ಶಿಕ್ಷಕನಿಗೆ ಯಾವ ರಾಜ್ಯ-ರಾಷ್ಟ್ರ ಪ್ರಶಸ್ತಿಯ ಅಗತ್ಯವಿಲ್ಲ, ತಾನು ಕಲಿಸಿದ ಶಿಷ್ಯಂದಿರು ತಮಗಿಂತ ಉನ್ನತ ಮಟ್ಟ ತಲುಪಿದರೆ ಅದೇ ನಮಗೆ ದೊಡ್ಡ ಪ್ರಶಸ್ತಿ ಇದ್ದಂತೆ ಎಂದರು.

ವೇದಿಕೆಯ ಮೇಲೆ ಶಿಕ್ಷಕರಾದ ಕೆ.ಎಮ್ ಪತ್ರಯ್ಯ, ಎಚ್.ಎನ್ ಆನವೇರಿ, ಡಿ.ಸಿ ಬೊಮ್ಮನಗೌಡರ, ಪಿ.ಪಿ ನಿರ್ವಾಣಿಶೆಟ್ಟರ, ಎಸ್.ಬಿ ಮಳಲಿ, ಜೆ.ಜಿ ಹುಲ್ಲೂರ, ಬಿ.ಜೆ ದೊಡ್ಡಮನಿ, ವಿ.ಬಿ ಮುಳಗುಂದ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಬೇರೆ ಬೇರೆ ಊರುಗಳಿಂದ, ರಾಜ್ಯಗಳಿಂದ ಮಾಜಿ ವಿದ್ಯಾರ್ಥಿಗಳು ಆಗಮಿಸಿ ತಾವು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸೇವೆಯ ಕುರಿತು ಸಂತೋಷ ಹಂಚಿಕೊಂಡು ಗುರುವಂದನವನ್ನು ಸ್ವೀಕರಿಸಿದರು. ಅಗಲಿದ ಸಹಪಾಠಿಗಳು ಹಾಗೂ ಶಿಕ್ಷಕರ ಸದ್ಗತಿಗಾಗಿ ಪ್ರಾರ್ಥಿಸಿದರು.

ಮುಂಡರಗಿಯ ನಯನಾ ಅಳವಂಡಿ ಪ್ರಾರ್ಥಿಸಿದರು. ಸುರೇಶ ಬಸವರಡ್ಡಿ ಸ್ವಾಗತಿಸಿದರೆ ಯೋಗೇಶಕುಮಾರ ಮತ್ತೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ.ಆಯ್ ಉಳ್ಳಾಗಡ್ಡಿ ಕಾರ್ಯಕ್ರಮ ನಿರೂಪಿಸಿದರು.

ಪ್ರವೀಣ ಮಾಂಡ್ರೆ ವಂದಿಸಿದರು. ಖ್ಯಾತ ಸಂಗೀತಗಾರ ಗುರು ಹಿರೇಮಠ ಮತ್ತು ನಯಾನಾ ಸಂಗೀತ ಕಾರ್ಯಕ್ರಮ ನೀಡಿದರು.

### ಬೇಂದ್ರೆ ಕವಿ-ಕಾವ್ಯ ಪರಿಚಯ, ಕವಿಗೋಷ್ಠಿಯಲ್ಲಿ ಭಾಗ್ಯಲಕ್ಷ್ಮೀ ನಾರಾಯಣ ಅಭಿಮತ

# ಬೇಂದ್ರೆಯವರ ಸಾಹಿತ್ಯ ಅಧ್ಯಯನ ಬದುಕಿಗೆ ಪ್ರೇರಣೆ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ವರಕವಿ ದ.ರಾ ಬೇಂದ್ರೆಯವರ ಸಾಹಿತ್ಯ ಅಧ್ಯಯನ ಇಂದಿನ ಪೀಳಿಗೆಗೆ ಸಾಕಷ್ಟು ಪ್ರೇರಣೆ ನೀಡುತ್ತದೆ ಎಂದು ಮೈಸೂರಿನ ಶಿಕ್ಷಕಿ ಹಾಗೂ ಹಿರಿಯ ಕವಯತ್ರಿ ಸಿ.ಎನ್ ಭಾಗ್ಯಲಕ್ಷ್ಮೀ ನಾರಾಯಣ ಅಭಿಪ್ರಾಯಪಟ್ಟರು.



ಟ್ರಸ್ಟ್ ಅಧ್ಯಕ್ಷ ರುದ್ರಪ್ಪ ಭಂಡಾರಿ ಮಾತನಾಡಿ, ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ರಚನೆಯಾಗಿ ಒಂಬತ್ತು ವರುಷಗಳಾಗಿವೆ, ಅಂದಿನಿಂದ ಇಂದಿನವರೆಗೆ ರಾಜ್ಯದ ಮೂಲೆ ಮೂಲೆಗಳಲ್ಲಿ ವಿನೂತನವಾಗಿ ಕನ್ನಡ ಪರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಕನ್ನಡದ ಅಸ್ಮಿತೆ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದರು.

ಅವರು ಇತ್ತೀಚೆಗೆ ಕೊಪ್ಪಳದ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ರುದ್ರಪ್ಪ ಭಂಡಾರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಧಾರವಾಡ ನಗರದ ಸಾಧನಕೇರಿಯ ದ.ರಾ ಬೇಂದ್ರೆಯವರ ಮನೆಯಂಗಳದಲ್ಲಿ ನಡೆದ ಬೇಂದ್ರೆ ಕವಿ-ಕಾವ್ಯ ಪರಿಚಯ, ಕವಿಗೋಷ್ಠಿ ಹಾಗೂ ಬೇಂದ್ರೆ ಕಾವ್ಯಗಾಯನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಬೇಂದ್ರಯವರು ಜ್ಞಾನಪೀಠ ಪ್ರಶಸ್ತಿ ಪಡೆದ 2ನೇ ಸಾಹಿತಿ. ಅವರ ನಾಕುತಂತಿ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಅವರ ಕವನಗಳು ಇಂದಿಗೂ ಪ್ರಸ್ತುತವಾಗಿವೆ. ಅವುಗಳಲ್ಲಿ ಜೀವನದ ಪ್ರೇರಕ ಶಕ್ತಿಗಳಿವೆ. ಅವುಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ. ಈ ಕಾರ್ಯಕ್ರಮಕ್ಕೆ ಬೆಂಬಲ, ಪ್ರೋತ್ಸಾಹ ನೀಡಿದ ಧಾರವಾಡದ ಹಿರಿಯ ಪತ್ರಕರ್ತ, ಬರಹಗಾರ ಎಚ್.ಆರ್ ವಸ್ತ್ರದ ಅವರ ಸಹಕಾರವನ್ನು ನೆನೆಯಲೇಬೇಕು ಎಂದು ಹೇಳಿದರು.

ಮೈಸೂರಿನ ಸಾಹಿತಿ ರಂಗಸ್ವಾಮಿ ಪಂಡಿತ್, ಶಿಕ್ಷಕಿ ಹಾಗೂ ಕವಯತ್ರಿ ದೀಪಶ್ರೀ, ಜ್ಯೋತಿ ಬೆಟ್ಟಯ್ಯ, ಶಶಿಕುಮಾರ್ ಎಂ.ಎ., ವಿದ್ಯಾರ್ಥಿನಿ ಪೂಜಾ ಕುಟೆ, ಎಚ್.ಆರ್ ವಸ್ತ್ರದ, ರುದ್ರಪ್ಪ ಭಂಡಾರಿ ಮೊದಲಾದವರು ಬೇಂದ್ರೆಯವರ ಆಯ್ದ ಕವಗಳನ್ನು ವಾಚಿಸಿದರು. ಸಿ.ಎನ್ ಭಾಗ್ಯಲಕ್ಷ್ಮೀ ನಾರಾಯಣ ಕವನಗಳನ್ನು ಹಾಡಿದರು.

ಈ ಸಂದರ್ಭದಲ್ಲಿ ಕವಿತೆ ವಾಚನ ಮಾಡಿದ ಎಲ್ಲರಿಗೂ ಕುಕನೂರಿನ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ವತಿಯಿಂದ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಭೋಜನ ಕೂಟದ ಉಸ್ತುವಾರಿಯನ್ನು ಪ್ರೀತಿ ಎಚ್. ವಸ್ತ್ರದ ವಹಿಸಿದ್ದರು

# ಗ್ರಾಕೂಸ್ ಕಾರ್ಯಕರ್ತರಿಂದ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಾರ್ಮಿಕರ ಮಾನವ ದಿನಗಳನ್ನು ಇನ್ನೂ 50 ದಿನಗಳಷ್ಟು ಹೆಚ್ಚಿಸಬೇಕೆಂದು ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ (ಗ್ರಾಕೂಸ್) ಕೂಲಿ ಕಾರ್ಮಿಕರು ಹಕ್ಕೊತ್ತಾಯ ಮಾಡಿ ಶುಕ್ರವಾರ ಪಟ್ಟಣದ ಮಿನಿ ವಿಧಾನಸೌಧದಲ್ಲಿ ಪ್ರತಿಭಟನೆ ನಡೆಸಿ, ತಹಸೀಲ್ದಾರ ಹಾಗೂ ಶಾಸಕಿ ಎಂ.ಪಿ ಲತಾ ಮಲ್ಲಿಕಾರ್ಜುನ ಅವರಿಗೆ ಮನವಿ ಸಲ್ಲಿಸಿದರು.



ಬರಗಾಲದಿಂದ ತತ್ತರಿಸುತ್ತಿರುವ ತಾಲೂಕಿನ ಜನತೆ ಕೇಂದ್ರ ಸರ್ಕಾರ ಮಂಜೂರು ಮಾಡಿದ್ದ 100 ಮಾನವ ದಿನಗಳ ಕೆಲಸವನ್ನು ಈಗಾಗಲೇ ಮಾಡಿ ಮುಗಿಸಿದ್ದಾರೆ. ಮಳೆಯಿಲ್ಲದೇ ರೈತರ ಜಮೀನಿನಲ್ಲಿ ಕೂಲಿ ಕೆಲಸ ಸಿಗುತ್ತಿಲ್ಲ. ಇದರಿಂದ ಸಾವಿರಾರು ಕುಟುಂಬಗಳು ಕೆಲಸವಿಲ್ಲದೇ ಜೀವನ ನಿರ್ವಹಣೆಗೆ ತೊಂದರೆಯಾಗುತ್ತಿದೆ. ಈಗಾಗಲೇ 100 ಮಾನವ ದಿನಗಳ ಕೂಲಿ ಕೆಲಸವನ್ನು ಮಾಡಲಾಗುತ್ತಿದ್ದು, ಕೆಲವೇ ದಿನಗಳಲ್ಲಿ ಮುಗಿಯುವ ಹಂತದಲ್ಲಿದೆ. ಕೂಡಲೇ ಇನ್ನೂ 50 ದಿನಗಳ ಮಾನವ ದಿನಗಳನ್ನು ನರೇಗಾ ಯೋಜನೆಯಡಿ ಹೆಚ್ಚುವರಿಯಾಗಿ ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.


ಬರಗಾಲ ಕೂಲಿ ಕಾರ್ಮಿಕರನ್ನು ಕಂಗಾಲಾಗಿಸಿದೆ. ನರೇಗಾದಲ್ಲಿ ಕೂಲಿ ಮಾಡಿದ ಹಣವನ್ನು ವಿಳಂಬ ಮಾಡದೇ ತಕ್ಷಣ ಅವರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕು. ಬರ ಪರಿಹಾರಕ್ಕಾಗಿ 50 ದಿನಗಳ ಮಾನವ ಕೆಲಸವನ್ನು ಒದಗಿಸುವಂತೆ ಮನವಿ ಮಾಡಿದರು.

ಗ್ರಾಕೂಸ್ ಸಂಘಟನೆಯ ಭಾಗ್ಯಮ್ಮ, ಗೀತಮ್ಮ, ರೇಖಾ, ಕಮಲಮ್ಮ, ಸರೋಜಮ್ಮ, ಹಾಲಮ್ಮ, ಅಂಜೀನಮ್ಮ, ಯಶೋಧಾ, ಪಾರ್ವತಿ, ಸಾವಿತ್ರಮ್ಮ, ಇಂದ್ರಮ್ಮ ಮುಂತಾದವರು ಭಾಗವಹಿಸಿದ್ದರು.



■ವಿಜಯಸಾಕ್ಷಿ ಸುದ್ದಿ, ಗದಗ

ನವರಾತ್ರಿ ಹಬ್ಬದ ಪ್ರಯುಕ್ತ ಹಸಿರು ಉಡುಪು ಧರಿಸಿದ ಹೀರಾ, ಗೌರಮ್ಮ ಹಾಗೂ ಸಂಗಡಿಗರು, ತೇಜಾನಗರ



■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ನಾಗಾವಿಯ ಗ್ರಾಮದೇವಿ ದೇವಸ್ಥಾನದಲ್ಲಿ ನವರಾತ್ರಿ ಆಚರಣೆಯ ನಿಮಿತ್ತ ದ್ಯಾಮವ್ವ ದೇವಿಗೆ ವಿಶೇಷ ಅಲಂಕಾರ ನೆರವೇರಿಸಲಾಗಿತ್ತು. ನೂರಾರು ಭಕ್ತರು ಶ್ರೀದೇವರ ದರ್ಶನ ಪಡೆದು ಕೃತಾರ್ಥರಾದರು.

## ಅಣ್ಣಿಗೇರಿ ತಾಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಡಿಸಿ ಗುರುದತ್ತ ಹೆಗಡೆ

# ನಾಗರಿಕ ಸೌಲಭ್ಯಗಳ ವಿತರಣೆಗೆ ಆದ್ಯತೆ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾ ಮಟ್ಟದಲ್ಲಿ ಹಾಗೂ ಜಿಲ್ಲಾಧಿಕಾರಿಗಳು ತಾಲೂಕು ಮಟ್ಟದಲ್ಲಿ ಜನತಾ ದರ್ಶನ ನಡೆಸಲು ಸರಕಾರ ನಿರ್ದೇಶನ ನೀಡಿದ್ದು, ಅದರಂತೆ ಅಣ್ಣಿಗೇರಿ ತಾಲೂಕು ಮಟ್ಟದ ಜನತಾದರ್ಶನ ನಡೆಸಲಾಗುತ್ತಿದೆ. ಎಲ್ಲ ಸಮಸ್ಯೆಗಳನ್ನು ಕಾಲಮಿತಿಯಲ್ಲಿ ಪರಿಹರಿಸಲಾಗುವುದು ಮತ್ತು ಸರಕಾರದ ಹಂತದಲ್ಲಿ ಆಗಬೇಕಾದ ಕಾರ್ಯಾದೇಶಗಳಿಗಾಗಿ ಸರಕಾರಕ್ಕೆ ಕಳುಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಹೇಳಿದರು.

ಅವರು ಶುಕ್ರವಾರ ಬೆಳಿಗ್ಗೆ ಅಣ್ಣಿಗೇರಿ ಪಟ್ಟಣದ ಆದಿಕವಿ ಪಂಪ ಸ್ಮಾರಕ ಭವನದಲ್ಲಿ ಜಿಲ್ಲಾಡಳಿತ, ಅಣ್ಣಿಗೇರಿ ತಾಲೂಕಾಡಳಿತ, ತಾಲೂಕು ಪಂಚಾಯಿತಿ ಹಾಗೂ ಪುರಸಭೆ ಸಹಯೋಗದೊಂದಿಗೆ ಆಯೋಜಿಸಿದ್ದ ತಾಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜನತಾ ದರ್ಶನದಲ್ಲಿ ಸಾರ್ವಜನಿಕರ ವೈಯಕ್ತಿಕ ಹಾಗೂ ಸಾಮುದಾಯಿಕ ಸಮಸ್ಯೆ, ಅಹವಾಲುಗಳನ್ನು ಸ್ವೀಕರಿಸಲಾಗುತ್ತದೆ. ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲಿದ್ದಾರೆ.



ಅಹವಾಲು, ಸಮಸ್ಯೆಗಳು ಸರಕಾರದ ನೀತಿ-ನಿಯಮಗಳಿಗೆ ಸಂಬಂಧಿಸಿದ್ದರೆ, ಅವುಗಳನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಸರಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಜನತಾ ದರ್ಶನ ಉದ್ಘಾಟಿಸಿದ ಶಾಸಕ ಎನ್.ಎಚ್ ಕೋನರಡ್ಡಿ ಅವರು ಮಾತನಾಡಿ, ಸರಕಾರವು ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಸಕ್ರಿಯಗೊಳಿಸಲು ಮತ್ತು ಅಧಿಕಾರಿಗಳು ಜನರಿಗೆ ಜವಾಬ್ದಾರರಾಗಲು ಜನತಾ ದರ್ಶನ ಆರಂಭಿಸಲು ಸೂಚನೆ ನೀಡಿದೆ. ಪ್ರತಿ ವಾರದ ನಿಗದಿತ ಎರಡು ದಿನ ನವಲಗುಂದ ಮತ್ತು ಅಣ್ಣಿಗೇರಿ ತಾಲೂಕಿನಲ್ಲಿ ಖುದ್ದಾಗಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಪರಿಹಾರ ಸೂಚಿಸುತ್ತಿದ್ದೇನೆ. ಜಿಲ್ಲಾಡಳಿತ ಜಾಗೂ ಜಿಲ್ಲಾಧಿಕಾರಿಗಳ ಸಹಕಾರದಿಂದ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ವೇದಿಕೆಯಲ್ಲಿ ಅಣ್ಣಿಗೇರಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಭಾಗ್ಯಶ್ರೀ ಜಹಗೀರದಾರ, ಅಣ್ಣಿಗೇರಿ ಪುರಸಭೆ ಅಧ್ಯಕ್ಷ ಮೆಹಬೂಬಿ ನವಲಗುಂದ, ಉಪಾಧ್ಯಕ್ಷೆ ಜಯಲಕ್ಷ್ಮೀ ಜಕರೆಡ್ಡಿ, ಅಣ್ಣಿಗೇರಿ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಮೃತ ಮೀಸಿ, ಜನತಾ ದರ್ಶನ ನೋಡಲ್ ಅಧಿಕಾರಿ ಆರ್.ಎಂ ಕಂಟೆಪ್ಪಗೌಡರ, ಆರಕ್ಷಕ ವೃತ್ತ ನಿರೀಕ್ಷಕರಾದ ರವಿಕುಮಾರ್ ಕಪ್ಪತ್ತನವರ, ಆರಕ್ಷಕ ಉಪನಿರೀಕ್ಷಕರಾದ ಸಿದ್ಧಾರೂಢ ಆಲದಕಟ್ಟಿ, ಪುರಸಭೆ ಮುಖ್ಯಾಧಿಕಾರಿ ವೈ.ಜಿ ಗದ್ದಿಗೌಡರ ಇದ್ದರು.

ಕಾರ್ಯಕ್ರಮದಲ್ಲಿ ಪಶು ವೈದ್ಯಕೀಯ ಇಲಾಖೆಯ ಸಹಾಯಕ ನಿರ್ದೇಶಕ ಮನೋಹರ ದ್ಯಾಬೇರಿ, ಡಾ.ಸಂತೋಷ ಕರೇಭರಮಣ್ಣವರ, ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕ ಮಹಮ್ಮದ ಅಲಿ ಅಲ್ಲಾಪುರ, ಕೃಷಿ ಇಲಾಖೆಯ ಶ್ರೀನಾಥ್ ಚಿಮ್ಮಲಗಿ, ಪಿಆರ್ ಇಡಿ ಎಇಇ ಎಂ.ಜಿ ಸಿಂದೆ, ವಿವಿಧ ಇಲಾಖೆ ಅಧಿಕಾರಿಗಳಾದ ಮರಿಬಸಪ್ಪ ಸಜ್ಜನ, ಮಂಜುನಾಥ ಎಸ್, ದಯಾನಂದ ಒಡೆಯರ, ಪ್ರದೀಪ ಚಾಲುಕ್ಯ, ಕಿರಣಕುಮಾರ ಕರತಂಗಿ, ರಾಘವೇಂದ್ರ ಪೂಜಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶಿಕ್ಷಕರಾದ ಡಿ.ಆರ್ ಕಬ್ಬೂರ ಪ್ರಾರ್ಥಿಸಿದರು. ಅಣ್ಣಿಗೇರಿ ತಹಸೀಲ್ದಾರ ಶಿವಾನಂದ ಹೆಬ್ಬಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಎ.ಎ ಹುಬ್ಬಳ್ಳಿ ಹಾಗೂ ಎ.ಎಂ ದೊಡ್ಡಮನಿ ಕಾರ್ಯಕ್ರಮ ನಿರೂಪಿಸಿದರು. ವೈ.ಜಿ ಗದ್ದಿಗೌಡರ ವಂದಿಸಿದರು.

> ಜಿಲ್ಲಾಡಳಿತ ನಿರಂತರವಾಗಿ ಸಾರ್ವಜನಿಕರ ಅಹವಾಲು, ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ ಪರಿಹರಿಸಲು ಕ್ರಮವಹಿಸುತ್ತಿದೆ. ಜಿಲ್ಲೆಯ ಎಲ್ಲ ತಹಸೀಲ್ದಾರರು ಪ್ರತಿ ದಿನ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಕ್ರಮವಹಿಸುತ್ತಿದ್ದಾರೆ. ಜಿಲ್ಲಾಡಳಿತದಿಂದ ಸಾರ್ವಜನಿಕರ ಆಶಯಗಳಿಗೆ ತಕ್ಷಣ ಪ್ರತಿಕ್ರಿಯಿಸಲು ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದರು.

## ಕಸಾಪ: ಇಂದು ದಸರಾ ಕವಿಗೋಷ್ಠಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಸಾಮಾಜಿಕ-ಸಾಂಸ್ಕೃತಿಕ ವೇದಿಕೆ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ ಗದಗ ಇವರ ಸಹಯೋಗದಲ್ಲಿ ಜಿಲ್ಲಾ ಮಟ್ಟದ 'ದಸರಾ ಕವಿಗೋಷ್ಠಿ'ಯನ್ನು ಅ.21ರ ಶನಿವಾರ ಹಮ್ಮಿಕೊಳ್ಳಲಾಗಿದೆ.

ನಾಗಾವಿಯ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದಲ್ಲಿ ಮಧ್ಯಾಹ್ನ 2.30ಕ್ಕೆ ಜರುಗುವ ಕವಿಗೋಷ್ಠಿಯನ್ನು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ವಿಷ್ಣುಕಾಂತ ಚಟಪಲ್ಲಿ ಉದ್ಘಾಟಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅವರು ಗೋಷ್ಠಿಯ ಅಧ್ಯಕ್ಷತೆವಹಿಸುವರು. ವಕೀಲ ಬಸವರಾಜ ಸಂಶಿ ಗೊಜನೂರ ಆಶಯ ನುಡಿಯನ್ನು ಮಂಡಿಸಲಿದ್ದಾರೆ.

ಕವಿಗೋಷ್ಠಿಯಲ್ಲಿ ಕವಿಗಳಾದ ಬಸವರಾಜ ನೆಲಜೇರಿ, ಶಿವಾನಂದ ಹುನಗುಂಡಿ, ಕೊಟ್ರೇಶ ಜವಳಿ, ನಾಗರಾಜ ಹಣಗಿ, ಎಂ.ಡಿ. ಮಾದರ, ಬಸವರಾಜ ಶಿರುಂದ, ಎಸ್. ಕೆ.ಆಡೀನ್, ಎನ್. ಡಿ. ಮೇಗಲಮನಿ, ಎಸ್. ವಿ.ಕಾಕೋಳ, ಪ್ರೊ.ಪುಂಡಲೀಕ ಮಾದರ, ಮಂಜುನಾಥ ವಾಲ್ಮೀಕಿ, ಶರಣಪ್ಪ ಪೂಜಾರ, ಸಂಗೀತಾ ಹಡಪದ, ಮಂಜುಳಾ ವೆಂಕಟೇಶಯ್ಯ, ರತ್ನಾ ಬದಿ, ಭುವನೇಶ್ವರಿಅಂಗಡಿ, ಲಾಡಮಾ ನದಾಫ, ಕೆ.ಜೆ. ಹೊನ್ನಾದೇವಿ, ಕಲಾಶ್ರೀ ಹಾದಿಮನಿ, ಪ್ರೇಮಾ ಗುಳಗೌಡರ, ಅಕ್ಕಮಹಾದೇವಿ ಕಮತ, ಸವಿತಾ ಕಲಹಾಳ, ಶಾರದಾ ಬಾಣದ, ಸ್ನೇಹಾ ಮಾಲಿಗೌಡ್ರ, ಜ್ಯೋತಿ ಮ್ಯಾಗೇರಿ, ತ್ರಿವೇಣಿ ನೀರಾಲೋಟಿ, ಶರಣುದಂಡಿನ, ಸೋಮಶೇಖರ ಬಾರ್ಕಿ, ಈಶ್ವರಕುರಿ, ಎಸ್.ಎಸ್. ಸ್ಥಾವರಮಠ, ವಿಶ್ವನಾಥ ಬೇಂದ್ರೆ, ಆನಂದಕುಮಾರ ಮೇಗಡಿ, ಬಸವರಾಜಕ್ಯಾರಕೊಪ್ಪ, ಮಂಜುನಾಥಡೋಣಿ, ವಿಶ್ವನಾಥಕಮ್ಮಾರ, ಮಂಜುನಾಥ ಫಾಳಿ, ಎಚ್. ಎಸ್.ಮಹೇಶ, ಕಳಕಪ್ಪ ಜಲ್ಲಿಗೇರಿ, ರವಿ ದೇವರಡ್ಡಿ, ಮಹಾಂತೇಶ ಮಲ್ಲಾರಿ, ಮಧುರಾಜರಾಂಪೂರ ಸೇರಿದಂತೆಇತರರುಭಾಗವಹಿಸಿ ಕವನ ವಾಚಿಸಲಿದ್ದಾರೆಎಂದು ಕಸಾಪ ಜಿಲ್ಲಾಘಟಕದ ಪ್ರಕಟಣೆ ತಿಳಿಸಿದೆ.

ಸಾಹಿತ್ಯ ಪರಿಷತ್ತಿನಸದಸ್ಯರು, ಸಾಹಿತ್ಯಾಭಿಮಾನಿಗಳುಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಪ್ರೊ.ಚಂದ್ರಪ್ಪ ಬಾರಂಗಿ,ಗೌರವ ಕಾರ್ಯದರ್ಶಿ ಶಿವಾನಂದ ಗಿಡ್ನಂದಿ, ಕಿಶೋರಬಾಬು ನಾಗರಕಟ್ಟಿ, ಕೋಶಾಧ್ಯಕ್ಷಈರಣ್ಣ ಮಾದರಸಹಕಾರ್ಯದರ್ಶಿ ಡಾ.ದತ್ತಪ್ರಸನ್ನ ಪಾಟೀಲಅವರು ಹೊರಡಿಸಿದ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

▶▶ ಮೊದಲನೇ ಪುಟದಿಂದ

## ಬಹುನಿರೀಕ್ಷಿತ ಶಿಬಿರಕ್ಕೆ ಸಚಿವ ಡಾ.ಎಚ್.ಕೆ.ಪಾಟೀಲ ಚಾಲನೆ

ಆಸಕ್ತರು ಮೊದಲೇ ತರಬೇತಿಗೆ ಹೆಸರು ನೊಂದಾಯಿಸಬೇಕು. ಹೆಸರು ನೋಂದಾಯಿಸಲು ದೀಪಕ (9886472416), ಪುಟ್ಟರಾಜ (9060505993), ಸುರೇಶ (9060703554) ಇವರನ್ನು ಸಂಪರ್ಕಿಸಬಹುದಾಗಿದೆ. ಮೊದಲು ಹೆಸರು ನೋಂದಾಯಿಸಿದವರಿಗೆ ಆದ್ಯತೆ ನೀಡಲಾಗುವುದು.

**ಉದ್ಘಾಟನೆ:** ಭೀಷ್ಮಕೆರೆ ಆವರಣದಲ್ಲಿ ಶನಿವಾರ ಬೆಳಿಗ್ಗೆ 10 ಗಂಟೆಗೆ ಹಾಯಿದೋಣಿ ಜಲಕ್ರೀಡಾ ತರಬೇತಿ ಶಿಬಿರದ ಉದ್ಘಾಟನೆಯನ್ನು ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ ಸಂಕನೂರ, ಪ್ರದೀಪ ಶೆಟ್ಟರ, ನರಗುಂದ ಶಾಸಕ ಸಿ.ಸಿ ಪಾಟೀಲ, ರೋಣ ಶಾಸಕ ಜಿ.ಎಸ್ ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ-ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

# ಕಟ್ಟಡ ಕಾರ್ಮಿಕ ಮಂಡಳಿಯ ಬಹುಕೋಟಿ ಹಗರಣದ ನ್ಯಾಯಾಂಗ ತನಿಖೆಗೆ ಆಗ್ರಹ


■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕಟ್ಟಡ 'ಕಾರ್ಮಿಕರ ಹೆಸರಿನಲ್ಲಿ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಗರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಹಾಗೂ ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಜಿಲ್ಲಾ ಘಟಕದ ನಿಯೋಗ ಆಗ್ರಹಿಸಿದೆ.

ಈಚೆಗೆ ಕೊಪ್ಪಳ ನಗರದಲ್ಲಿ ಖಾಸಗೀ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಕಾರ್ಮಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಸೀನ್ ಅವರಿಗೆ ಸಂಘದ ಜಿಲ್ಲಾ ಘಟಕದ ನಿಯೋಗದ ತಂಡ ಮನವಿ ಪತ್ರ ಸಲ್ಲಿಸುವ ಮೂಲಕ ನ್ಯಾಯಾಂಗ ತನಿಖೆಗೆ ಒತ್ತಾಯಿಸಿದೆ.

ವಸತಿ ಮತ್ತು ನಿವೇಶನದ ಹೆಸರಿನಲ್ಲಿ ಮಂಡಳಿಯಲ್ಲಿ ನಡೆದಿದೆ ಎನ್ನಲಾದ ಸಾವಿರಾರು ಕೋಟಿ ರೂಪಾಯಿಗಳ ಕಾರ್ಮಿಕರ ಬೆವರಿನ ಹಣವನ್ನು ಕಾರ್ಮಿಕರ ಕಲ್ಯಾಣದ ಹೆಸರಿನಲ್ಲಿ ಲೂಟಿ ನಡೆಸಲಾಗಿದೆ ಎನ್ನಲಾದ ಹಗರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಿ, ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳಿಂದಲೇ ಮಂಡಳಿಗೆ ಮರುಪಾವತಿ ಮಾಡುವಂತೆ ಕಠಿಣ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸಿದರೆ, ಗುತ್ತಿಗೆ ಹಾಗೂ ಖರೀದಿ ಪದ್ಧತಿ ಅಳವಡಿಸದೆ, ನೇರವಾಗಿ ಫಲಾನುಭವಿ ಖಾತೆಗೆ ಜಮೆಯಾಗುವಂತ ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ನಿಯೋಗದ ತಂಡ ಮೊಹಮ್ಮದ್ ಮೊಸೀನ್ ಅವರನ್ನು ಒತ್ತಾಯಿಸಿದೆ.

ಕಟ್ಟಡ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಧನ ಸಹಾಯ ಮತ್ತು ಇತರೆ ಸೌಲಭ್ಯಗಳನ್ನು ಕೂಡಲೇ ವಿಲೇವಾರಿ ಮಾಡಬೇಕು. ವಿವಾಹ ಪ್ರೋತ್ಸಾಹಧನ ಮೊತ್ತವನ್ನು ರೂ.1 ಲಕ್ಷಕ್ಕೆ ಹೆಚ್ಚಿಸಬೇಕು. ಕಾರ್ಮಿಕರು ಸ್ವಾಭಾವಿಕ ಮರಣ ಹೊಂದಿದಲ್ಲಿ ರೂ.5. ಲಕ್ಷ ಹಣವನ್ನು ಮಂಜೂರು ಮಾಡಬೇಕು. ಕಾರ್ಮಿಕರ ಮಕ್ಕಳ ಕಳೆದ ವರ್ಷದ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು ಮತ್ತು ಪ್ರಸಕ್ತ ಸಾಲಿನ ವಿದ್ಯಾರ್ಥಿವೇತನಕ್ಕೆ ಕೂಡಲೇ ಅರ್ಜಿ ಆಹ್ವಾನಿಸುವಂತೆ ನಿಯೋಗ ಮನವಿಯಲ್ಲಿ ಒತ್ತಾಯಿಸಿದೆ.



ಆರೋಗ್ಯ ಮತ್ತು ಪರಿಹಾರ ಧನ ಸಹಾಯವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆಯಾಗುವ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಈಗಾಗಲೇ ಸೇವಾಸಿಂಧು ವೆಬ್‌ಸೈಟ್‌ನಲ್ಲಿ ಜಾರಿಯಲ್ಲಿರುವ ವ್ಯವಸ್ಥೆಯನ್ನು ಕೈಬಿಡಬೇಕು ಎಂದು ನಿಯೋಗ ಮನವಿಪತ್ರದಲ್ಲಿ ಒತ್ತಾಯಿಸಿದೆ.

ಕಾರ್ಮಿಕರ ಮೂಗಿಗೆ ತುಪ್ಪ ಸವರುವ ರೀತಿಯಲ್ಲಿ ವಿವಿಧಕಿಟ್ ಹಾಗೂ ಅವರ ಮಕ್ಕಳಿಗೆ ಲ್ಯಾಪ್‌ಟಾಪ್ ಕೊಡುವ ಮೂಲಕ ಸರ್ಕಾರ ಕಾರ್ಮಿಕರನ್ನು ವಂಚಿಸಲು ಹೊರಟಿದೆ. ಈ ಕೂಡಲೇ ಈ ಯೋಜನೆಯನ್ನು ಸ್ಥಗಿತಗೊಳಿಸಿ, ಪರ್ಯಾಯವಾಗಿ ನೈಜ ಕಟ್ಟಡ ಕಾರ್ಮಿಕರನ್ನು ಗುರುತಿಸಿ, ಅವರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮೆಯಾಗುವಂತೆ ವ್ಯವಸ್ಥೆ ಅಳವಡಿಸಿಕೊಳ್ಳುವಂತೆಯೂ ನಿಯೋಗ ಸಲಹೆ ನೀಡಿದೆ.

ನಕಲಿ ಕಾರ್ಮಿಕರ ನೋಂದಣಿ ವ್ಯವಸ್ಥೆ ಅವ್ಯಾಹಿತವಾಗಿ ನಡೆದಿದೆ. ಇದರಲ್ಲಿ ಭಾಗಿರಯಾಗಿರುವತಾಲ್ಲೂಕು ಮಟ್ಟದಕಾರ್ಮಿಕ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮಜರುಗಿಸಬೇಕು.ನೋಂದಣಿ ಸಮಯದಲ್ಲಿ ಅರ್ಜಿಗಳನ್ನು ಸ್ವೀಕರಿಸಿ, ಕಾರ್ಮಿಕ ಸಂಘಟನೆಗಳ ಮುಖಂಡರೊಂದಿಗೆ ಚರ್ಚಿಸಿ, ನೋಂದಣಿ ಮಾಡುವಂತೆ ಹಾಗೂ ನೋಂದಣಿಯಾಗಿರುವ ನಕಲಿ ಕಾರ್ಮಿಕರ ಪತ್ತೆಗೂಇದೇ ಪದ್ಧತಿ ಅಳವಡಿಸುವಂತೆಯೂ ಹಾಗೂ ನಕಲಿ ಕಾರ್ಮಿಕರ ಚೀಟಿಗಳನ್ನು ರದ್ದುಪಡಿಸುವಂತೆಯೂ ನಿಯೋಗದ ತಂಡ ಒತ್ತಾಯಿಸಿದೆ.

ಸಂಘದ ಜಿಲ್ಲಾ ಘಟಕದ ನಿಯೋಗದಲ್ಲಿ ಜಿಲ್ಲಾ ಸಂಚಾಲಕ ಎಸ್.ಎ. ಗಫಾರ್, ಜಿಲ್ಲಾ ಸಂಘಟನಾ ಸಂಚಾಲಕ ತುಕಾರಾಮ ಬಿ.ಪಾತ್ರೋಟಿ, ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಮುನೀರ್ ಅಹ್ಮದ್ ಸಿದ್ಧೀಖಿ, ನಗರಸಭೆ ಮಾಜಿ ಸದಸ್ಯ ಜಾಕೀರ್ ಹುಸೇನ್ ಕಿಲ್ಲೇದಾರ್ಇತರರು ಹಾಜರಿದ್ದರು.

▶▶ ಮೊದಲನೇ ಪುಟದಿಂದ

# ಮೈಸೂರು ದಸರಾ ವಿಶ್ವದಲ್ಲಿಯೇ ಶ್ರೇಷ್ಠ

ಪಾರಂಪರಿಕ ಕಟ್ಟಡಗಳು, ಸ್ಮಾರಕಗಳು ನಿಮ್ಮ ಊರಿನಲ್ಲಿಯೇ ಇದ್ದರೆ ಅಂತಹ ಸ್ಮಾರಕವನ್ನು ರಕ್ಷಿಸುವ ಹಕ್ಕು ನಿಮಗಿರುತ್ತದೆ. ಅಲ್ಲದೆ, ಆಸಕ್ತರು ದತ್ತು ತೆಗೆದುಕೊಂಡು ರಕ್ಷಿಸಬಹುದಾಗಿದೆ. ಇಂತಹ ಕಟ್ಟಡಗಳ ರಕ್ಷಣೆಗೆ ಜನರನ್ನು ಉತ್ತೇಜಿಸಲು ರಾಜ್ಯ ಸರ್ಕಾರವು 'ನಮ್ಮ ಸ್ಮಾರಕಗಳ ದತ್ತು ಕಾರ್ಯಕ್ರಮ'ವನ್ನು ಹಮ್ಮಿಕೊಂಡಿದ್ದು, ಅದು ಯಶಸ್ವಿಯಾಗಿ ಸಾಗುತ್ತಿದೆ ಎಂದರು.

ಅಮೇರಿಕಾದ ಅನಿವಾಸಿ ಭಾರತಿಯರೊಡನೆ ಆನ್‌ಲೈನ್ ಮೂಲಕ (ಝೂಮ್ ಮಿಟಿಂಗ್) ಪಾರಂಪರಿಕ ಕಟ್ಟಡಗಳ ದತ್ತು ತೆಗೆದುಕೊಳ್ಳುವ ಸಂಬಂಧ ಚರ್ಚಿಸಿದ್ದೇನೆ. ಇದರಿಂದಾಗಿ



ಸುಮಾರು 20 ಅನಿವಾಸಿ ಭಾರತೀಯರು ಪಾರಂಪರಿಕ ಕಟ್ಟಡಗಳನ್ನು ದತ್ತು ತೆಗೆದುಕೊಂಡು ಸಂರಕ್ಷಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಕರಾದ ರಾಜಶೇಖರ್, ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರಾದ ಎಂ.ಕೆ ಸವಿತಾ ಸೇರಿದಂತೆ ಇತರರು ಹಾಜರಿದ್ದರು.

# ನರಗುಂದ: ಅಂಜುಮನ್ ಸಮಿತಿಗೆ ಆಡಳಿತಾಧಿಕಾರಿ ನೇಮಕಕ್ಕೆ ಮನವಿ

■ ವಿಜಯಸಾಕ್ಷಿ ಸುದ್ದಿ, ನರಗುಂದ

ಸ್ಥಳೀಯ ಅಂಜುಮನ್ ಏ- ಇಸ್ಲಾಂ ಕಮಿಟಿ ಆಡಳಿತ ಮಂಡಳಿಯ ಅಧಿಕಾರ ಅವಧಿ ಪೂರ್ಣಗೊಂಡಿದ್ದು, ನೂತನ ಸದಸ್ಯರ ನೇಮಕವಾಗುವವರೆಗೂ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಹಾಗೂ ತಕ್ಷಣವೇ ನೂತನ ಪದಾಧಿಕಾರಿಗಳ ಚುನಾವಣೆ ಪ್ರಕ್ರಿಯೆ ಆರಂಭಿಸುವಂತೆ ಕಾಂಗ್ರೆಸ್ ಅಲ್ಪಸಂಖ್ಯಾತರ ತಾಲೂಕು ಘಟಕ ಒತ್ತಾಯಿಸಿದೆ.

ವಕ್ಫ್ ಬೋರ್ಡಿನ ಜಿಲ್ಲಾಧಿಕಾರಿ ಸೋಲಿಹಾ ಗೊಲಅಂದಾಜ್ ಅವರಿಗೆ ಈ ಕುರಿತು ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕ ಮನವಿ ಸಲ್ಲಿಸಿ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಘಟಕದ ಕಾರ್ಯದರ್ಶಿ ಐ.ಪಿ. ಚಂದೂನವರ ಮಾತನಾಡಿ, 2018ರಲ್ಲಿ ನೋಂದಣಿ ಆಗಿರುವ ಸಮಿತಿಯ ಆಡಳಿತ



ಮಂಡಳಿಯ ಅಧ್ಯಕ್ಷ- ಉಪಾಧ್ಯಕ್ಷ ಹಾಗೂ 11 ಸದಸ್ಯರ ಅಧಿಕಾರಾವಧಿ 2021ರಲ್ಲಿಯೇ ಪೂರ್ಣಗೊಂಡಿದೆ.

ಆದರೂ, ಸರ್ಕಾರ ಸಮಿತಿಗೆ ನೂತನ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವಲ್ಲಿ ವಿಳಂಬ ಧೋರಣೆ ಅನುಸರಿಸಿದೆ. ಕೊನೆಗೆ ಆಡಳಿತ ಅಧಿಕಾರಿಯನ್ನಾದರೂ ನೇಮಕ ಮಾಡುವಲ್ಲಿಯೂ ನಿರ್ಲಕ್ಷ್ಯ ಧೋರಣೆ ಅನುಸರಿಸಿದೆ ಎಂದು ದೂರಿದರು. ಹೀಗಾಗಿ, ಸಮಿತಿಯಲ್ಲಿನ ಅವ್ಯವಹಾರ ಹಾಗೂ ಭ್ರಷ್ಟಾಚಾರ ತಡೆಗೆ ಕೂಡಲೇ ಚುನಾವಣೆ ಪ್ರಕ್ರಿಯೆ ಆರಂಭಿಸುವಂತೆ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ವಕ್ಫ್ ಬೋರ್ಡಿನ ಇನ್‌ಸ್ಪೆಕ್ಟರ್ ತೌಸೀಫ್ ಅಹಮ್ಮದ್ ಮಕಾದಾರ್, ರಿಯಾಜ್ ಅಹಮ್ಮದ್ ನಾಲಬಂದ ಇತರರು ಇದ್ದರು.

▶▶ ಮೊದಲನೇ ಪುಟದಿಂದ

# ಶ್ರೀದೇವಿಯ ಪುರಾಣ ದೇಹದ ಪುರಾಣವಾಗಿದೆ

ಕಳೆದ 43 ವರ್ಷಗಳಿಂದ ನಿರಂತರವಾಗಿ ದೇವಿ ಪುರಾಣ ನಡೆಸಿಕೊಂಡು ಬಂದಿರುವದಕ್ಕೆ ಭಕ್ತರ ಶೃದ್ಧಾಭಕ್ತಿಯೇ ಪ್ರೇರಣೆ ಎಂದರು.

ಮುಖ್ಯ ಅತಿಥಿಗಳಾಗಿ ಗದಗ ಜಿಲ್ಲಾ ಕ.ಸಾ.ಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ, ಶಿಕ್ಷಕಿ ಉಮಾದೇವಿ ಪಾಟೀಲ, ಶೈಲಾ ವಿಜಯಕುಮಾರ ಕಬಾಡರ ಹಾಗೂ ಅನ್ನಪೂರ್ಣೇಶ್ವರಿ ಸಂತೋಷ ಕಬಾಡರ ದಂಪತಿಗಳು ಆಗಮಿಸಿದ್ದರು.

ವಿವೇಕಾನಂದಗೌಡ ಪಾಟೀಲ ಮಾತನಾಡಿ, ಅಡವೀಂದ್ರಸ್ವಾಮಿ ಮಠ ದೇವಿ ಆರಾಧನೆಯ ಶೃದ್ಧಾಕೇಂದ್ರವಾಗಿ ಬಹು ವರ್ಷಗಳಿಂದ ಜನತೆಯಲ್ಲಿ ಧರ್ಮ ಜಾಗೃತಿ, ವೈಚಾರಿಕತೆ ಮೂಡಿಸುವ ಮೂಲಕ ಶಿವಾನುಭವ ಗೋಷ್ಠಿ ಕಾರ್ಯಕ್ರಮದಿಂದ ಜನಸಮುದಾಯವನ್ನು ಸನ್ಮಾರ್ಗದೆಡೆಗೆ ಮುನ್ನಡೆಸುವ ಕಾರ್ಯ ಮಾಡುತ್ತಿದೆ ಎಂದರು.

ಡಾ.ರಾಜಗುರು ಗುರುಸ್ವಾಮಿ ಕಲಕೇರಿ ಗವಾಯಿಗಳಿಂದ ಪುರಾಣ-ಪ್ರವಚನ ಜರುಗಿತು. ಚನ್ನಬಸಯ್ಯ ಶಾಸ್ತ್ರೀ ಹೇಮಗಿರಿಮಠ ಪುರಾಣ ಪಠಿಸಿದರು. ಸುಕ್ರುಸಾಬ ಮುಲ್ಲಾ, ಜಗನ್ನಾಥ ಕಲಬುರ್ಗಿ, ಗುರುನಾಥ ಸುತಾರ, ಎಸ್.ಬಿ ಭಜಂತ್ರಿ ಅವರು ಸಂಗೀತ ಸಾಥ್ ನೀಡಿದರು.

ವೇದಿಕೆಯ ಮೇಲೆ ಜಾತ್ರಾ ಮಹೋತ್ಸವದ ಅಧ್ಯಕ್ಷ ಪ್ರಕಾಶ ಬಂಡಿ, ಮಹಿಳಾ ಸಮಿತಿಯ ಅಧ್ಯಕ್ಷೆ ಪ್ರಮೀಳಾದೇವಿ ಬಳಿಗಾರ, ಕಾರ್ಯಾಧ್ಯಕ್ಷ ಬಸವರಾಜ ಪಲ್ಲೇದ, ಶಿವಾನುಭವ ಸಮಿತಿಯ ಅಧ್ಯಕ್ಷ ವ್ಹಿ.ಎಂ ಕುಂದ್ರಾಳಹಿರೇಮಠ ಉಪಸ್ಥಿತರಿದ್ದರು. ಶಿವಾನುಭವ ಸಮಿತಿಯ ಹಾಗೂ ದಸರಾ-ಜಾತ್ರಾ ಮಹೋತ್ಸವದ ಎಲ್ಲ ಸಮಿತಿಗಳ ಪದಾಧಿಕಾರಿಗಳು, ಭಕ್ತಾದಿಗಳು ಪಾಲ್ಗೊಂಡಿದ್ದರು.

ಪ್ರಸಾದ ಭಕ್ತಿ ಸೇವೆಯನ್ನು ರಾಜಶೇಖರಯ್ಯ ವಸ್ತ್ರದ, ವೀರಣ್ಣ ಸಂಶಿ, ನಿಂಗಪ್ಪ ಬಳಿಗಾರ, ಬಸನಗೌಡ ಭರಮಗೌಡ್ರ, ಮಲ್ಲಿಕಾರ್ಜುನ ಸವದತ್ತಿಮಠ, ಸುಮಿತ್ರಾ ಹುರಳಿ, ಸಿದ್ರಾಮಪ್ಪ ಹೊಸಂಗಡಿ, ಡಾ. ವ್ಹಿ.ಎಸ್ ಕಂಠಿ ವಹಿಸಿಕೊಂಡಿದ್ದರು. ಸಿ.ಬಿ ಹಿರೇಮಠ ಸ್ವಾಗತಿಸಿದರು. ಸುವರ್ಣಾ ಹೊಸಂಗಡಿ ವಂದಿಸಿದರು.

## ತೋಟಗಾರಿಕೆ ಬೆಳೆ ಬೆಳೆಯಲು ನೆರವು; ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರ ಹಾಗೂ ರಾಜ್ಯ ಸರ್ಕಾರ ತೋಟಗಾರಿಕೆ ಇಲಾಖೆ ಮುಖಾಂತರ ತೋಟಗಾರಿಕೆ ಬೆಳೆಗಳಾದ ಹಣ್ಣು, ತರಕಾರಿ, ಹೂವು, ಪ್ಲಾಂಟೇಷನ್ ಬೆಳೆಗಳು, ಔಷಧಿ ಮತ್ತು ಸುಗಂಧ ಸಸ್ಯ ಸೇರಿದಂತೆ ಸಾಂಬಾರು ಬೆಳೆಗಳಿಗೆ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಲು ತೋಟಗಾರಿಕೆ ಇಲಾಖೆ, ಮುಂಡರಗಿ ತಾಲ್ಲೂಕಿನ ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಿದೆ.

ಇಲಾಖೆಯ ವೆಬ್‌ಸೈಟ್‌ನಲ್ಲಿ ಆಸಕ್ತ ರೈತರು ತಮ್ಮ ಜಮೀನಿನ ಪಹಣಿ ಪತ್ರ, ಫೋಟೊ, ಖಾತಾ ಉತಾರಾ, ಬೆಳೆ ದೃಢೀಕರಣ ಪತ್ರ ಹಾಗೂ ರೂ.20 ಮೊತ್ತದ ಛಾಪಾ ಕಾಗದದಲ್ಲಿ ದೃಢೀಕರಣದೊಂದಿಗೆ ಆನ್‌ಲೈನ್ ಮುಖಾಂತರ ಇದೇ 31ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಮುಂಡರಗಿ ತಾಲ್ಲೂಕಿನ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಎಂ.ಎಂ. ತಾಂಬೋಟಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಮುಳಗುಂದ ರಸ್ತೆ, ಗದಗ

ದೂರವಾಣಿ ಸಂಖ್ಯೆ : (08372) 238783 E-mail I.D. eekuwsdbgadag@gmail.com

**ಅಲ್ಪಾವಧಿ ಟೆಂಡರ್ ಪ್ರಕಟಣೆ**

"ಕೇಂದ್ರ ಪುರಸ್ಕೃತ ಅಮೃತ್-2.0 ಯೋಜನೆಯಡಿ ಶಿರಹಟ್ಟಿ ಪಟ್ಟಣದ ಹಾಲಿ ನೀರು ಸರಬರಾಜು ಯೋಜನೆಯ ಘಟಕಗಳ ಎಲೆಕ್ಟ್ರೋಮೆಕ್ಯಾನಿಕಲ್ ಉಪಕರಣಗಳ ಷರತ್ತುಬದ್ಧ ಮೌಲ್ಯಮಾಪನ ಕಾರ್ಯ ಕೈಗೊಳ್ಳುವ ಕಾಮಗಾರಿ" ಗೆ **ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳು** : (1) ಟೆಂಡರ್ ಸಂಖ್ಯೆ: 1141 ದಿನಾಂಕ : **19.10.2023** (2) ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) (ಜಿ.ಎಸ್.ಟಿ ಹೊರತುಪಡಿಸಿ) : ರೂ. **3,71,000.00** (3) ಇ.ಎಮ್.ಡಿ (ರೂ. ಗಳಲ್ಲಿ) : ರೂ. **9,300.00** (4) ಬಿಡ್ ದಾಖಲೆಗಳ ಮೊತ್ತ (ರೂ.ಗಳಲ್ಲಿ) (ಎಲ್ಲಾ ತೆರಿಗೆಗಳು ಸೇರಿದಂತೆ) : ರೂ. **1,500.00** (ಡಿ.ಡಿ ಮುಖಾಂತರ ಮಾತ್ರ) ಕಾಮಗಾರಿ ಪೂರ್ಣಗೊಳಿಸಲು ನಿಗಧಿತ ಅವಧಿ (ಮಳೆಗಾಲ ಸೇರಿ) : 15 ದಿನಗಳು. **ಟೆಂಡರ್ ದಿನಾಂಕಗಳು** : (1) ಬಿಡ್ ದಾಖಲೆಗಳನ್ನು ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **26-10-2023** ರಂದು 17.00 ಗಂಟೆಯ ವರೆಗೆ, (2) ಬಿಡ್ ದಾಖಲೆಗಳನ್ನು ವಿತರಿಸುವ ಕೊನೆಯ ದಿನಾಂಕ ಮತ್ತು ಸಮಯ : **27-10-2023** ರಂದು 17.00 ಗಂಟೆಯ ವರೆಗೆ, (3) ಬಿಡ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : **30-10-2023** ರಂದು 17.30 ಗಂಟೆಯ ವರೆಗೆ ಮತ್ತು (4) ಬಿಡ್ ತೆರೆಯುವ ದಿನಾಂಕ : **31-10-2023** ರಂದು 11.00 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಅಭಿಯಂತರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ ವಿಭಾಗ ಗದಗ ಇವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/267/2023-24

## ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಅಕ್ಟೋಬರ್ 22 ರಂದು ರವಿವಾರ ಬೆಳಿಗ್ಗೆ:6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಶ್ರೀಮತಿ ದೀಪ್ತಿ ಶ್ರೀಕಾಂತ ಪಾಠಕರವರಿಂದ "ಸುಗಮ ಸಂಗೀತ" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಸಣ್ಣಮಲಕಪ್ಪ ಭಜಂತ್ರಿ ಇವರಿಂದ "ಶಹನಾಯಿ ವಾದನ" ಸಾಯಂಕಾಲ: 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಎಚ್.ವಿ ಮಳಲಿ ಇವರಿಂದ "ಸುಗಮ ಸಂಗೀತ" ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಗಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಅ.23ಕ್ಕೆ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಸುಕ್ಷೇತ್ರ ಶಿಂಗಟಾಲೂರು ಶ್ರೀ ವೀರಭದ್ರೇಶ್ವರ ದೇವಸ್ಥಾನ ಮುಂದಿರುವ ಉದ್ಯಾನವನದಲ್ಲಿ ಅ.23ರಂದು ಬೆಳಗ್ಗೆ 10 ಗಂಟೆಗೆ ಪುನರ್ ನಿರ್ಮಾಣಗೊಂಡ ನಾಗದೇವತೆ ದೇವಸ್ಥಾನದಲ್ಲಿ ನಾಗಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಸಮಾರಂಭ ಜರುಗಲಿದೆ ಎಂದು ದೇವಸ್ಥಾನ ಟ್ರಸ್ಟ್ ಕಮಿಟಿಯ ನಿರ್ದೇಶಕ ಕೊಟ್ರೇಶ ಬಳ್ಳೊಳ್ಳಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಂಗಟಾಲೂರು ಶ್ರೀ ವೀರಭದ್ರೇಶ್ವರನ ಭಕ್ತರಾದ ಡಾ.ಸಿದ್ದಲಿಂಗಪ್ಪ ಕರ್ಜಗಿ ಅವರು ಸುಮಾರು 8 ಲಕ್ಷ ರೂ. ದೇಣಿಗೆ ನೀಡಿ, ನಾಗದೇವತೆ ದೇವಸ್ಥಾನವನ್ನು ಸುವ್ಯವಸ್ಥಿತವಾಗಿ ಪುನರ್ ನಿರ್ಮಿಸಿಕೊಟ್ಟಿದ್ದಾರೆ. ಅವರ ಆಶಯದಂತೆ ದೇವಸ್ಥಾನದ ಮುಂದೆ ಸುಂದರವಾದ ಉದ್ಯಾನವನ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದ್ದು, ಬರುವ ಜನವರಿ ಮೊದಲ ವಾರದಲ್ಲಿ ಉದ್ಯಾನವನ ಉದ್ಘಾಟನೆಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ನಾಗಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಶ್ರೀ ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ ವಿರೂಪಾಪೂರ, ಡಾ.ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ಬನ್ನಿಕೊಪ್ಪ, ಶ್ರೀಅಭಿನವ ಸಿದ್ಧವೀರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಶ್ರೀವೀರಭದ್ರೇಶ್ವರ ದೇವಸ್ಥಾನದ ಕಮಿಟಿಯ ಪರವಾಗಿ ಮನವಿ ಮಾಡಿದರು. ರಜನಿಕಾಂತ ದೇಸಾಯಿ, ಕಲವೀರಪ್ಪ ಭಜಂತ್ರಿ ಸುದ್ದಿಗೋಷ್ಠಿಯಲ್ಲಿದ್ದರು.

## ಗೋಡಂಬಿ ಬೆಳೆ ಬೆಳೆಯಲು ಪ್ರೋತ್ಸಾಹ

■ವಿಜಯಸಾಕ್ಷಿ ಸುದ್ದಿ, ಗದಗ

ಗೋಡಂಬಿ ಮತ್ತು ಕೋಕೋ ನಿರ್ದೇಶನಾಲಯ ಹಾಗೂ ತೋಟಗಾರಿಕೆ ಇಲಾಖೆ ಮುಂಡರಗಿ ಇವರ ಸಹಯೋಗದಲ್ಲಿ ಮುಂಡರಗಿ ತಾಲ್ಲೂಕಿನಲ್ಲಿ ಗೋಡಂಬಿ ಬೆಳೆ ಬೆಳೆಯಲು ಆಸಕ್ತ ರೈತರಿಗೆ ಸೂಕ್ತ ಸಲಹೆ, ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಎಂ.ಎಂ.ತಾಂಬೋಟಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಡರಗಿ ತಾಲ್ಲೂಕಿನಲ್ಲಿ ಗೋಡಂಬಿ ಬೆಳೆ ಬೆಳೆಯಲು ಸೂಕ್ತ ಮಣ್ಣು, ಅಗತ್ಯ ನೀರಿನ ಮೂಲಗಳು ಹಾಗೂ ಸೂಕ್ತ ಹವಾಗುಣ ಹೊಂದಿದ್ದು, ಇದುಗೋಡಂಬಿ ಬೆಳೆಗೆ ಪೂರಕವಾಗಿದೆ.

ಆಸಕ್ತ ರೈತರು ತಮ್ಮ ಜಮೀನಿನ ಪಹಣಿ ಪತ್ರ, ಬ್ಯಾಂಕ್ ಖಾತೆಯ ಪಾಸ್ ಪುಸ್ತಕ, ಆಧಾರ್ ಕಾರ್ಡ್, ಫೋಟೊ ಹಾಗೂ ಮಣ್ಣು ಮತ್ತು ನೀರಿನ ಪರೀಕ್ಷಾ ವರದಿಯೊಂದಿಗೆ ತೋಟಗಾರಿಕೆ ಕಚೇರಿಗೆ ಇದೇ 31ರ ಒಳಗಾಗಿ ಅರ್ಜಿ ಸಲ್ಲಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### "ಚಿಣ್ಣರ ಚಿತ್ರ ಚಿತ್ತಾರದ ಮೆಲುಕು' ಕಾರ್ಯಕ್ರಮದಲ್ಲಿ ಡಾ. ಶಿವಪ್ಪ ಕುರಿ

## ರಾಷ್ಟ್ರಮಟ್ಟದ ಚಿತ್ರಕಲೋತ್ಸವ ಗದುಗಿನ ಹೆಮ್ಮೆ

■ವಿಜಯಸಾಕ್ಷಿ ಸುದ್ದಿ, ಗದಗ




ಕಲೆ, ಸಾಹಿತ್ಯ, ಸಂಸ್ಕೃತಿಗೆ ಗದಗ ಜಿಲ್ಲೆಯ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಕಳೆದ ವರ್ಷ ನಗರದಲ್ಲಿ ರಾಜ್ಯ ಮಟ್ಟದ 'ಚಿಣ್ಣರ ಚಿತ್ರ ಚಿತ್ತಾರ' ಚಿತ್ರಕಲೋತ್ಸವದ ಮೂಲಕ 40 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಕಲೆಯ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯ ನಡೆದಿತ್ತು. ಈ ಬಾರಿ ರಾಷ್ಟ್ರಮಟ್ಟದ ಚಿತ್ರಕಲೋತ್ಸವದ ಮೂಲಕ ಜಿಲ್ಲೆ ಮತ್ತೊಂದು ದಾಖಲೆಯ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿ ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರು ಹಾಗೂ ಪ್ರಾಚಾರ್ಯ ಡಾ. ಶಿವಪ್ಪ ಕುರಿ ಹೇಳಿದರು.

ಅವರು ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ನಗರದ ಹಾಕಿ ಮೈದಾನದ ಬಳಿ ಇರುವ ಆರ್ಟ್ ಅಡ್ಡಾದಲ್ಲಿ ನಡೆದ 2022-23ನೇ ಸಾಲಿನ ರಾಜ್ಯ ಮಟ್ಟದ 'ಚಿಣ್ಣರ ಚಿತ್ರ ಚಿತ್ತಾರ' ಚಿತ್ರಕಲೋತ್ಸವದ ಮೆಲುಕು ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಲವು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಮ್ಮೇಳನ ಆಯೋಜನೆಯ ಮೂಲಕ ಗಮನ ಸೆಳೆದ ಗದಗ ಜಿಲ್ಲೆ, ಈ ಬಾರಿ 2023-24ನೇ ಸಾಲಿನ ರಾಷ್ಟ್ರಮಟ್ಟದ ಚಿಣ್ಣರ ಚಿತ್ರ ಚಿತ್ತಾರ ಚಿತ್ರಕಲೋತ್ಸವದ ಮೂಲಕ ಲಕ್ಷಾಂತರ ಚಿತ್ರಕಲಾಸಕ್ತ ವಿದ್ಯಾರ್ಥಿಗಳ ಕನಸಿಗೆ ಬಣ್ಣ ತುಂಬುವ ಕಾರ್ಯ ಮಾಡಲು ಮುಂದಾಗಿರುವುದು ಶ್ಲಾಘನೀಯ. ಇದಕ್ಕೆ ಜಿಲ್ಲೆಯ ಜನತೆಯ ಸಹಕಾರ ಅವಶ್ಯಕವಾಗಿದ್ದು, ಯಶಸ್ವಿ ಚಿತ್ರಕಲೋತ್ಸವಕ್ಕೆ ಎಲ್ಲರೂ ಶ್ರಮಿಸೋಣ ಎಂದು ಹೇಳಿದರು.

> ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಡಿ.ಎಸ್ ತಳವಾರ ಮಾತನಾಡಿ, ಚಿಣ್ಣರ ಚಿತ್ರ ಚಿತ್ತಾರ ನಮಗೆ ಸಾಕಷ್ಟು ಅನುಭವ ನೀಡಿದೆ. ಪ್ರತಿಯೊಂದು ವಿಚಾರದಲ್ಲಿ ನಾವು ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದೇವೆ. ಜೊತೆಗೆ ಸಂತಸ ಪಟ್ಟಿದ್ದೇವೆ. ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ರೀತಿಯಲ್ಲಿ ಸಂಘಟನೆಯ ಮೂಲಕ ಚಿಣ್ಣರ ಚಿತ್ರ ಚಿತ್ತಾರ ರಾಷ್ಟ್ರಮಟ್ಟದ ಚಿತ್ರಕಲೋತ್ಸವ ಯಶಸ್ವಿಗೊಳಿಸೋಣ ಎಂದರು.

ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆಯ ಬಾಹುಬಲಿ ಜೈನರ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ ಬಾರಿ ಚಿತ್ರಕಲೋತ್ಸವ ಯಶಸ್ಸಿಗೆ ರಾಜ್ಯದ ಪ್ರತೀ ಜಿಲ್ಲೆಯಲ್ಲಿ ಜಿಲ್ಲಾ ಸಂಯೋಜಕರಾಗಿ ಕಾರ್ಯನಿರ್ವಹಿಸಿ ಮೊದಲ ಪ್ರಯತ್ನದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡಿದ ಕೀರ್ತಿ ಜಿಲ್ಲಾ ಸಂಯೋಜಕರಿಗೆ ಸಲ್ಲುತ್ತದೆ ಎಂದರು.

ಪ್ರೌಢಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಶರಣಪ್ಪ ನಾಗರಳ್ಳಿ, ಬಣ್ಣದ ಮನೆಯ ವಿಜಯ ಕಿರೇಸೂರ, ಕೇಂದ್ರ ದಲಿತ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಶಾಂತಕುಮಾರ ಭಜಂತ್ರಿ ಮಾತನಾಡಿದರು.

ಈ ವೇಳೆ 2022-23ನೇ ಸಾಲಿನ ಚಿಣ್ಣರ ಚಿತ್ರ ಚಿತ್ತಾರ ರಾಜ್ಯ ಮಟ್ಟದ ಚಿತ್ರಕಲೋತ್ಸವದಲ್ಲಿ ಜಿಲ್ಲಾ ಸಂಯೋಜಕರಾಗಿ ಕಾರ್ಯನಿರ್ವಹಿಸಿದ್ದ ಸಂಘಟಕರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

### ಮಳೆಯ ಕೊರತೆ ನಡುವೆಯೂ ಅಳಿದುಳಿದ ಬೆಳೆ ಸಂರಕ್ಷಣೆಗೆ ರೈತರ ಪರದಾಟ

## ಗೋವಿನಜೋಳ ಬೆಳೆಗೆ ಹಂದಿಗಳ ಹಾವಳಿ; ಬೆಳೆಗಾರರ ಸಂಕಟ

■ವಿಜಯಸಾಕ್ಷಿ ಸುದ್ದಿ, ನರಗುಂದ

ಮುಂಗಾರು ಹಂಗಾಮಿನಲ್ಲಿ ಅಲ್ಪಸ್ವಲ್ಪ ಸುರಿದ ಮಳೆಗೆ ಬಿತ್ತನೆ ಮಾಡಲಾಗಿದ್ದ ಗೋವಿನಜೋಳದ ಬೆಳೆ ಕಾಳುಕಟ್ಟಿ ನಿಂತಿದೆ.ಮಳೆ ಬಂದರೆ, ಚೇತರಿ ಕೊಳ್ಳಬಹುದೆಂದು ನಿರೀಕ್ಷೆಯಲ್ಲಿರುವ ಬೆಳೆಗಾರರಿಗೆ, ಹಂದಿಗಳ ಕಾಟ ಮತ್ತೊಂದು ಸಂಕಷ್ಟದ ಸುಳಿಗೆ ಸಿಲುಕಿಸಿದೆ.

ನರಗುಂದ ತಾಲ್ಲೂಕ ಕೇಂದ್ರದಿಂದ ಬಹುತೇಕ ಹಳ್ಳಿಗಳು ಕೇವಲ 20ಕಿ.ಮೀ. ದೂರದ ಅಲ್ಪಅಂತರದಲ್ಲಿವೆ. ಹೀಗಾಗಿ, ಪಟ್ಟಣದಲ್ಲಿನ ಹಂದಿಗಳು, ಗ್ರಾಮೀಣ ಪ್ರದೇಶದ ರೈತರ ಜಮೀನುಗಳಿಗೆ ಲಗ್ಗೆ ಹಾಕುವ ಮೂಲಕ ಫಸಲನ್ನು ತಿಂದು, ನಾಶಪಡಿಸುತ್ತಿವೆ. ಹೀಗಾಗಿ, ರೈತರ ಬದುಕು, 'ಬಾಣಲೆಯಿಂದ; ಬೆಂಕಿಗೆ' ಬಿದ್ದಂತಾಗಿದ್ದು, ಬಿತ್ತನೆ ಮಾಡಿದ ವೆಚ್ಚಕ್ಕೂ ಸರಿದೂಗದಷ್ಟು ಗೋವಿನಜೋಳ ಹಾಳಾಗಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.



ಹಂದಿಗಳು ಬೆಳೆಗಳಿಗೆ ನುಗ್ಗುತ್ತಿರುವ ಮಾಹಿತಿ ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ. ಸಂಬಂಧಿಸಿದ ಹಂದಿಗಳ ಮಾಲೀಕರಿಗೆ ನೋಟೀಸ್ ನೀಡಿ, ಕಾನೂನು ಕ್ರಮ ಜರುಗಿಸಲಾಗುವುದು.

– ಮಲ್ಲಪ್ಪ ವೈ.ಪೂಜಾರ,
ಅಭಿವೃದ್ಧಿ ಅಧಿಕಾರಿ. ಗ್ರಾಮ ಪಂಚಾಯ್ತಿ ಬನಹಟ್ಟಿ.

ಆಗಾಗ ಸುರಿದ ಅಲ್ಪಸ್ವಲ್ಪ ಮಳೆಗೆ ಈಗಾಗಲೇ ಗೋವಿನಜೋಳ ಫಸಲು ತೆನೆಕಟ್ಟಿದೆ. ಆದರೆ, ಅದನ್ನು ಸಂರಕ್ಷಿಸುವುದೇ ದೊಡ್ಡ ಸವಾಲಿನ ಕೆಲಸವಾಗಿದೆ. ಫಸಲನ್ನು ಹಗಲಿನಲ್ಲಿ ಕಾಯುತ್ತೇವೆ. ಆದರೆ, ರಾತ್ರಿಯಾಗುತ್ತಿದ್ದಂತಿಯೇ ಹಂದಿಗಳ ದಂಡು, ಹೊಲಕ್ಕೆ ನುಗ್ಗಿ, ಇರುವ ಅಲ್ಪಸ್ವಲ್ಪ ಫಸಲನ್ನು ತಿಂದು ನಾಶಪಡಿಸುತ್ತಿವೆ. ಕಳೆದ ಎರಡು ವರ್ಷಗಳಿಂದ ಈ ಹಂದಿಗಳ ಕಾಟ ಹೆಚ್ಚಾಗಿದೆ ಎಂಬುದು ರೈತರ ಆರೋಪ.

ರಂಟೆ, ಕುಂಟೆ ಸೇರಿದಂತೆ ಭೂಮಿ ಹದ ಮಾಡುವುದು ಸೇರಿದಂತೆ ಬೀಜ, ಗೊಬ್ಬರ ಹಾಗೂ ಕಳೆ ಕೀಳುವ ಆಳಿನ ಕೂಲಿ ಸೇರಿ ಪ್ರತಿಎಕರೆಗೆ 25 ಸಾವಿರಕ್ಕೂ ಅಧಿಕ ಮೊತ್ತದಷ್ಟು ಖರ್ಚು ಮಾಡಿ, ಬಿತ್ತನೆ ಮಾಡಿದ್ದೇವೆ. ಒಂದೆಡೆ ಮಳೆರಾಯನ ಅವಕೃಪೆಯಿಂದಾಗಿ, ಹಾಕಿದ ಬಂಡವಾಳವಾದರೂ ಕೈಸೇರಿದರೆ ಸಾಕೆಂದು ಕೊಂಡಿದ್ದೇವೆ. ಆದರೆ, ಈಗ ಈ ಹಂದಿಗಳ ದಾಳಿ, ಹಾಕಿದ ಬಂಡವಾಳಕ್ಕೂ ಕತ್ತರಿ ಬೀಳುವಂತೆ ನಮ್ಮನ್ನು ಸಾಲದ ಶೂಲಕ್ಕೆ ತಳ್ಳಿದೆ ಎಂಬುದು ಕುರ್ಲಗೇರಿ, ಕಣಕಿಕೊಪ್ಪ, ಕಲಕೇರಿ, ಹುಣಸಿಕಟ್ಟಿ ಸೇರಿದಂತೆ ವಿವಿಧ ಹಳ್ಳಿಗಳ ರೈತರ ಅಳಲು.

ತಾಲ್ಲೂಕು ಸೇರಿದಂತೆ ರಾಜ್ಯದಾದ್ಯಂತ ತೀವ್ರತರಹದ ಬರಗಾಲದ ಛಾಯೆ ಆವರಿಸಿದೆ. ಅಲ್ಪಸ್ವಲ್ಪ ಮಳೆಗೆ ಬೆಳೆದ ಗೋವಿನಜೋಳ ಮಾಡಿದ ಖರ್ಚನ್ನಾದರೂ ಸರಿದೂಗಿಸಬಹುದು ಎಂಬ ನಿರೀಕ್ಷೆ ಇತ್ತು.ಆದರೆ, ಹಂದಿಗಳ ದಾಳಿಯಿಂದಾಗಿ, ಅದುಕ್ಕೈ ಸೇರುವ ಭರವಸೆ ಕಳೆದುಕೊಂಡಿದ್ದೇವೆ.

ಹಂದಿಗಳ ದಾಳಿಯನ್ನು ನಿಯಂತ್ರಿಸಬೇಕಾದ ಗ್ರಾಮ ಪಂಚಾಯ್ತಿ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ತಾಳಿದ್ದಾರೆ. ಈ ಕುರಿತು ಅನೇಕ ಬಾರಿ ಮನವಿ ಸಲ್ಲಿಸಿದರೂ ಪಂಚಾಯ್ತಿ ಅಧಿಕಾರಿಗಳು ದಾಳಿ ತಡೆಗೆ ಕ್ರಮಕೈಗೊಂಡಿಲ್ಲ ಎಂಬುದು ರೈತರ ಆರೋಪ.

> ಮಳೆಯ ಕೊರತೆಯಿಂದಾಗಿ ಫಸಲು ಬಾಡಿ ನಿಂತಿದೆ. ಅಲ್ಪ ಮಳೆಗೆ ಕಾಳುಕಟ್ಟಿಕೊಂಡಿರುವ ಗೋವಿನಜೋಳ ಬೆಳೆ ಈಗ ಹಂದಿಗಳ ಪಾಲಾಗುತ್ತಿದೆ. ಪಂಚಾಯ್ತಿ ಕಚೇರಿಗೆ ಈ ಕುರಿತು ಮನವಿ ಸಲ್ಲಿಸಿದರೂ ಸೂಕ್ತ ಕ್ರಮ ಕೈಗೊಳ್ಳುವಲ್ಲಿ, ಅಧಿಕಾರಿಗಳು ವಿಫಲರಾಗಿದ್ದಾರೆ. ನಮಗೆ ಆಗಿರುವ ನಷ್ಟವನ್ನು ತುಂಬಿ ಕೊಡುವವರು ಯಾರು?ಎಂಬು ದೇಯಕ್ಷ ಪ್ರಶ್ನೆಯಾಗಿದೆ. ಮುಂದಾದರೂ ಹಂದಿ ಹಾವಳಿಯಿಂದ ರೈತರ ಫಸಲನ್ನು ಸಂರಕ್ಷಿಸಲು ತಾಲ್ಲೂಕು ಆಡಳಿತ ಮುಂದಾಗಬೇಕು.
>
> – ಪಾಲಾಕ್ಷಗೌಡ ಪಾಟೀಲ,
> ಕುರ್ಲಗೇರಿ ಗ್ರಾಮದ ರೈತ

## ಬೆಳೆ ಕಳೆದುಕೊಂಡ ರೈತನಿಗೆ ಪರಿಹಾರ ನೀಡಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ತಾಲೂಕಾ ಸಾರ್ವಜನಿಕ ಹೋರಾಟ ವೇದಿಕೆಯ ಆಶ್ರಯದಲ್ಲಿ ಅ.25, ಬುಧವಾರ 11 ಗಂಟೆಗೆ ತಾಮ್ರಗುಂಡಿ ಸಣ್ಣ ನೀರಾವರಿ ಇಲಾಖೆಯ ಕೆರೆಯ ನೀರಿನ ಗೇಟಿಗೆ ಬೀಗ ಹಾಕಿ ಪ್ರತಿಭಟನೆ ಮಾಡಲಾಗುವುದು ಎಂದು ವೇದಿಕೆ ಸಂಚಾಲಕ ಬಸವರಾಜ ನವಲಗುಂದ ತಿಳಿಸಿದರು.

ಸುದ್ದಿಗಾರೊಂದಿಗೆ ಮಾತನಾಡಿ ಅವರು, ಏಪ್ರಿಲ್‌ನಲ್ಲಿ ಆದ ಭಾರೀ ಮಳೆಗೆ ಕೆರೆಯ ಮುಂಭಾಗದಲ್ಲಿರುವ ರೈತ ಬಸಪ್ಪ ತಿಮ್ಮಪ್ಪ ವಡ್ಡರ ತಾಮ್ರಗುಂಡಿ ಎಂಬುವರ ಕೃಷಿ ಜಮೀನುಗಳು ಕೆರೆಯ ಒಡ್ಡು ಒಡೆದ ನೀರಿನ ರಭಸಕ್ಕೆ ತೋಟಗಾರಿಕೆ ಬೆಳೆ ಮತ್ತು ಕೃಷಿ ಜಮೀನು ಸಂಪೂರ್ಣ ನಾಶವಾಗಿದೆ. ಅದರ ಪರಿಹಾರವನ್ನು ಕೋರಿ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ವರದಿ ಸಲ್ಲಿಸಿದರೂ ಕೂಡಾ ಇಲ್ಲಿಯವರೆಗೂ ರೈತನಿಗೆ ಪರಿಹಾರ ನೀಡಿಲ್ಲ. ಸುಮಾರು 31 ಗುಂಟೆ ಕೃಷಿ ಜಮೀನಿನ ಭೂಸ್ವಾಧೀನದ ಹಣ ನ್ಯಾಯಾಲಯದ ಆದೇಶದಂತೆ ರೈತನಿಗೆ ಹಣ ಭರಣ ಆಗಿಲ್ಲ ಎಂದರು.

ಸಣ್ಣ ನೀರಾವರಿ ಇಲಾಖೆಯವರ ಬೇಜವಾಬ್ದಾರಿಯಿಂದ ಈ ರೈತ ಹೊಲ ಕಳೆದುಕೊಂಡಿದ್ದಲ್ಲದೆ, ಪರಿಹಾರವೂ ದೊರಕಿಲ್ಲ. ಕೂಡಲೇ ಈತನಿಗೆ ಪರಿಹಾರ ನೀಡದಿದ್ದರೆ ಸಣ್ಣ ನೀರಾವರಿ ಕೆರೆಯ ನೀರಿನ ಗೇಟಿಗೆ ಬೀಗ ಜಡಿದು ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

## ಉಚಿತ ಕಂಪ್ಯೂಟರ್ ತರಬೇತಿ


■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಎಂಜಿಎಂ ಫೌಂಡೇಶನ್ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪಟ್ಟಣ ಹಾಗೂ ಸುತ್ತಲಿನ ಗ್ರಾಮಗಳ 16 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳು, ಯುವಕ-ಯುವತಿಯರಿಗೆ ಕನ್ನಡದಲ್ಲಿ ಉಚಿತ ಕಂಪ್ಯೂಟರ್ ತರಬೇತಿ ಹಮ್ಮಿಕೊಂಡಿದೆ.

ಅ.30ರೊಳಗೆ ಪಟ್ಟಣದ ಮುಖ್ಯ ಬಜಾರ್ ರಸ್ತೆಯಲ್ಲಿನ ಎಂಜಿಎಂ ಮಾರ್ಟ್ ಮತ್ತು ಗೊಲ್ಲಾಳೇಶ್ವರ ದೇವಸ್ಥಾನ ಹತ್ತಿರದ ವಿಶ್ವ ಕಂಪ್ಯೂಟರ್‌ನಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ
ಕೋಡಿಯಲ್ಲಮ್ಮ ದೇವಿಯರು ವಿಶೇಷ ಪೂಜೆ, ಅಲಂಕಾರದೊಂದಿಗೆ ಶೋಭಾಯಮಾನವಾಗಿದ್ದರು



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ
ಹಳ್ಳದಕೇರಿ ಓಣಿಯ ದೊಡ್ಡ ದ್ಯಾಮವ್ವದೇವಿ ದೇವಸ್ಥಾನದಲ್ಲಿ ಅಂಲಕೃತ ದೇವಿ ಮೂರ್ತಿ.



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ
ಬಸ್ತಿಬಣದ ದೇವಸ್ಥಾನದಲ್ಲಿನ ಅಲಂಕಾರ ಶೋಭಿತೆ ಶ್ರೀ ಅಂಬಾಭವಾನಿದೇವಿ ಮೂರ್ತಿ.



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ
ಹಿರೇಬಣದ ಶ್ರೀ ಕಾಳಿಕಾದೇವಿ ಮೂರ್ತಿ ವಿಶೇಷ ಅಲಂಕಾರದೊಂದಿಗೆ.



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ
ಬಜಾರ್ ರಸ್ತೆಯಲ್ಲಿನ ರೇಣುಕಾದೇವಿ ದೇವಸ್ಥಾನದಲ್ಲಿ ಪೂಜೆ, ಅಲಂಕಾರದಿಂದ ಕಂಗೊಳಿಸಿದ ದೇವಿಮೂರ್ತಿ.

## ವಸತಿ ರಹಿತರ ಬೇಡಿಗಳಿಗೆ ಕೂಡಲೇ ಸ್ಪಂದಿಸಿ




■ವಿಜಯಸಾಕ್ಷಿ ಸುದ್ದಿ, ಗದಗ

ಸ್ಲಂ ಜನಾಂದೋಲನ-ಕರ್ನಾಟಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿಯ ನೇತೃತ್ವದಲ್ಲಿ ಗದಗ-ಬೆಟಗೇರಿಯ ನೈಜ್ ವಸತಿರಹಿತ ಕುಟುಂಬಗಳಿಗೆ ಮನೆಗಳ ಹಂಚಿಕೆಗೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಕಚೇರಿಯೆದುರು ಕಳೆದ 5 ದಿನಗಳಿಂದ ಹೋರಾಟ ನಡೆಸುತ್ತಿದ್ದು, ಸಚಿವರಾದ ಎಚ್.ಕೆ ಪಾಟೀಲರು ಬೇಡಕೆಗಳಿಗೆ ಸ್ಪಂದಿಸಬೇಕೆಂದು ಪ್ರಗತಿಪರ ಚಿಂತಕ ಬಸವರಾಜ ಪೂಜಾರ ಆಗ್ರಹಿಸಿದರು.

ಪ್ರತಿಭಟನೆಯನ್ನು ಬೆಂಬಲಿಸಿ ಮಾತನಾಡಿದ ಅವರು, ಜಿಲ್ಲಾಡಳಿತ ಬೇಡಿಕೆಗಳಿಗೆ ಸ್ಪಂದಿಸುವ ಬದಲಾಗಿ ಮೌನಕ್ಕೆ ಶರಣಾಗಿರುವುದನ್ನು ಖಂಡಿಸುತ್ತೇವೆ. ಕೂಡಲೇ 348 ಕುಟುಂಬಗಳಿಗೆ ನಮ್ಮ ಸಚಿವರು ಮನೆಗಳ ಹಂಚಿಕೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಗದಗ ಜಿಲ್ಲಾ ಸ್ಲಂ ಸಮಿತಿ ಜಿಲ್ಲಾ ಅಧ್ಯಕ್ಷ ಇಮ್ತಿಯಾಜ ಆರ್.ಮಾನ್ವಿ, ಕಾರ್ಯದರ್ಶಿ ಅಶೋಕ.ಎಸ್ ಕುಸಬಿ, ಗದಗ-ಬೆಟಗೇರಿ ಅಂಜುಮನ್-ಎ-ಇಸ್ಲಾಂ ಕಮಿಟಿಯ ಅಧ್ಯಕ್ಷರಾದ ಮಹ್ಮದಯುಸುಫ ನಮಾಜಿ, ವಸತಿರಹಿತ ಹೋರಾಟ ಸಮಿತಿ ಮುಖಂಡರಾದ ಪರವೀನಬಾನು ಹವಾಲ್ದಾರ, ಜಾಫರ ಢಾಲಾಯತ, ವಂದನಾ ಶ್ಯಾವಿ, ಮಕ್ತುಮಸಾಬ ಮುಲ್ಲಾನವರ, ಮರ್ದಾನಬಿ ಬಳ್ಳಾರಿ, ಕಮಲವ್ವ ಚಲವಾದಿ, ಮೆಹರುನಿಸಾ ಢಾಲಾಯತ, ಸಲೀಂ ಕದಡಿ, ಕವಿತಾ ಶ್ಯಾವಿ, ನಜಮುನಿಸಾ ಮುರಗೋಡ, ದ್ಯಾಮಣ್ಣ ಡೋಣಿ, ಶಾಜನಬಿ ಕರ್ನಾಚಿ, ಖಾಜಾಸಾಬ ಇಸ್ಮಾಯಿಲನವರ, ವಿಶಾಲಕ್ಷಿ ಹಿರೇಗೌಡ್ರ ಸೇರಿದಂತೆ ಗದಗ-ಬೆಟಗೇರಿ ನಗರದ ನೂರಾರು ವಸತಿರಹಿತರು ಪಾಲ್ಗೊಂಡಿದ್ದರು.

## ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅ.28ರಂದು ತಾಲೂಕು ಆಡಳಿತದ ವತಿಯಿಂದ ಅರ್ಥಪೂರ್ಣ ಮತ್ತು ವ್ಯವಸ್ಥಿತವಾಗಿ ಆಚರಿಸೋಣ ಎಂದು ತಹಸೀಲ್ದಾರ ಮಂಜುನಾಥ ಅಮಾಸಿ ಹೇಳಿದರು.

ಅವರು ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಗುರುವಾರ ವಾಲ್ಮೀಕಿ ಜಯಂತಿ ಆಚರಿಸುವ ನಿಮಿತ್ತ ಸಮಾಜದ ಮುಖಂಡರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಮಹರ್ಷಿ ವಾಲ್ಮೀಕಿಯವರು ಸರ್ವ ಜನಾಂಗದ ಪೂಜನೀಯ ಮಹಾತ್ಮರಾಗಿದ್ದಾರೆ. ಜಯಂತಿ ಆಚರಣೆಯ ಉದ್ದೇಶ ಅವರ ಜೀವನ ಚರಿತ್ರೆ, ತತ್ವ-ಸಿದ್ಧಾಂತಗಳ ಬಗ್ಗೆ ತಿಳಿಸುವುದಾಗಿದೆ. ಸರ್ವ ಸಮಾಜ ಬಾಂಧವರು ಮತ್ತು ಎಲ್ಲ ಇಲಾಖೆಯ ಅಧಿಕಾರಿಗಳು ಪಾಲ್ಗೊಳ್ಳಬೇಕು. ಎಲ್ಲ ಸರ್ಕಾರಿ ಕಚೇರಿ, ಶಾಲಾ-ಕಾಲೇಜುಗಳಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ಸೂಚಿಸಿದರು.


ಲಕ್ಷೇಶ್ವರ ತಾಲೂಕು ವಾಲ್ಮೀಕಿ ಸಂಘದ ಅಧ್ಯಕ್ಷ ಭೀಮಣ್ಣ ಯಂಗಾಡಿ ಮಾತನಾಡಿ, ತಾಲೂಕು ಆಡಳಿತದಿಂದ ಹಮ್ಮಿಕೊಳ್ಳುವ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಸಮಾಜ ಬಾಂಧವರು ಪಾಲ್ಗೊಳ್ಳಬೇಕು ಎಂದರು.

ಜಯಂತ್ಯುತ್ಸವದ ಅಂಗವಾಗಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದ ಮೆರವಣಿಗೆಯು ಪಂಪ ವೃತ್ತದಿಂದ ಪ್ರಾರಂಭವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಸೋಮೇಶ್ವರ ದೇವಸ್ಥಾನ ತಲುಪುವುದು. ಸೋಮೇಶ್ವರ ಹತ್ತಿರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ-3ರಲ್ಲಿ ಸಭಾ ಕಾರ್ಯಕ್ರಮ ಜರುಗುವುದು. ಶಾಸಕ ಡಾ.ಚಂದ್ರು ಲಮಾಣಿ ಉದ್ಘಾಟಿಸುವರು. ಗಣ್ಯಮಾನ್ಯರು, ಜನಪ್ರತಿನಿಧಿಗಳು, ಅಧಿಕಾರಿಗಳು ಪಾಲ್ಗೊಳ್ಳುವ ಬಗ್ಗೆ ಚರ್ಚಿಸಲಾಯಿತು.

ಈ ವೇಳೆ ಮುಖಂಡರಾದ ಎನ್.ಎನ್ ನೆಗಳೂರ, ಬಿ.ಎನ್ ರಾಟಿ, ಪ್ರಕಾಶ ಬೆಂತೂರ, ರಾಜು ಓಲೇಕಾರ. ಕೆ.ಓ ಹೂಲಿಕಟ್ಟಿ, ಕೋಟೆಪ್ಪ ವರ್ದಿ, ತಾಲೂಕಿನ ಸಮಾಜ ಕಲ್ಯಾಣ, ಬಿಸಿಎಂ, ಶಿಕ್ಷಣ, ಜಿ.ಪಂ, ತಾ.ಪಂ, ಪುರಸಭೆ, ಪೊಲೀಸ್, ಆರೋಗ್ಯ ಸೇರಿ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

## ವೀರರಾಣಿ ಕಿತ್ತೂರ ಚನ್ನಮ್ಮಳ ವಿಜಯೋತ್ಸವ ಆಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ



ಸ್ವಾತಂತ್ರ್ಯ ಹೋರಾಟಗಾರ್ತಿ ವೀರರಾಣಿ ಕಿತ್ತೂರ ಚನ್ನಮ್ಮಳ ವಿಜಯೋತ್ಸವವನ್ನು ಅ.23ರಂದು ಬೆಳಿಗ್ಗೆ 10 ಗಂಟೆಗೆ ಗದಗ ನಗರದಲ್ಲಿರುವ ವೀರರಾಣಿ ಕಿತ್ತೂರು ಚನ್ನಮ್ಮ ಪುತ್ಥಳಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಗುವುದು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ.ಎಫ್ ಡೋಣಿ ವಹಿಸುವರು. ರಾಣಿ ಚನ್ನಮ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಚೇರಮನ್ ಡಾ. ಎಸ್.ಕೆ ಮ್ಯಾಗೇರಿಯವರು ಕಂಚಿನ ಪುತ್ಥಳಿಗೆ ಮಾಲಾರ್ಪಣೆ ಮಾಡುವರು.

ಕಾರ್ಯಕ್ರಮದ ನಿಮಿತ್ತ 12*18 ಅಳತೆಯ ವೀರರಾಣಿ ಕಿತ್ತೂರು ಚನ್ನಮ್ಮಳ ಭಾವಚಿತ್ರವನ್ನು ದಿ.23ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಬಸವರಾಜ ವಾರಿ, ಬಸವರಾಜ ಕರಮುಡಿ ಇವರು ಉಚಿತವಾಗಿ ವಿತರಿಸುವರು.

ಈ ವಿಜಯೋತ್ಸವ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು, ಪುರುಷರು, ಯುವಕರು, ಯುವತಿಯರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಎಂ.ಬಿ ದೇಸಾಯಿಯವರು ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka